## ಶಾಲೆಯ ಶಿಕ್ಷಣ ನೀತಿ ಸಮಾಲೋಚನೆಗಾಗಿ ವಿಷಯಗಳು ಮತ್ತು ಪ್ರಶ್ನೆಗಳು :

### ಶಾಲಾ ಶಿಕ್ಷಣ ನೀತಿ ಸಮಾಲೋಚನೆಗಾಗಿ ವಿಷಯಗಳು :

1. ಪ್ರಾಥಮಿಕ ಶಾಲೆಯಲ್ಲಿ ಕಲಿಕೆಯ ಪರಿಣಾಮವನ್ನು ಖಚಿತಪಡಿಸುವುದು.
2. ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣವನ್ನು ವಿಸ್ತರಿಸುವುದು.
3. ವೃತ್ತಿ ಶಿಕ್ಷಣವನ್ನು ಬಲಗೊಳಿಸುವುದು.
4. ಶಾಲೆಯ ಪರೀಕ್ಷಾ ವಿಧಾನದಲ್ಲಿ ಸುಧಾರಣೆ ತರುವುದು.
5. ಉತ್ತಮ ಗುಣಮಟ್ಟದ ಶಿಕ್ಷಕರನ್ನು ಬೋಧನೆಗೆ ಸಿದ್ಧಪಡಿಸಲು ಶಿಕ್ಷಕರ ಶಿಕ್ಷಣದಲ್ಲಿ ನವೀಕರಣ ತರುವುದು.
6. ವಯಸ್ಕರ ಶಿಕ್ಷಣ ಹಾಗೂ ರಾಷ್ಟ್ರೀಯ ಮುಕ್ತ ಶಾಲಾ ವ್ಯವಸ್ಥೆಗಳ ಮೂಲಕ ವಿಶೇಷವಾಗಿ ಹೆಣ್ಣು ಮಕ್ಕಳು, ಪ.ಜಾತಿ, ಪ.ಪಂಗಡ ಹಾಗೂ ಅಲ್ಪಸಂಖ್ಯಾತರ ಅಕ್ಷರತೆಯನ್ನು ಗ್ರಾಮಾಂತರ ಪ್ರದೇಶದಲ್ಲಿ ತ್ವರಿತಗೊಳಿಸುವುದು.
7. ಶಾಲೆಗಳಲ್ಲಿ ಮತ್ತು ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ವ್ಯವಸ್ಥೆಯಾಧಾರಿತ ಶಿಕ್ಷಣವನ್ನು ವೃದ್ಧಿಗೊಳಿಸುವುದು.
8. ಶಾಲಾ ಶಿಕ್ಷಣದಲ್ಲಿ ವಿಜ್ಞಾನ ಹಾಗೂ ಗಣಿತ ಬೋಧನೆಯಲ್ಲಿ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಉತ್ತಮ ಪಡಿಸಲು ಹೊಸ ಜ್ಞಾನ, ಶಿಕ್ಷಣ ಶಾಸ್ತ್ರ, ಹೊಸ ವಿಧಾನಗಳನ್ನು ಅಳವಡಿಸುವುದು.
9. ಶಾಲೆಯ ಗುಣಮಟ್ಟ, ಶಾಲೆಯ ಮೌಲ್ಯಮಾಪನ ಮತ್ತು ಶಾಲೆಯ ನಿರ್ವಹಣಾ ವ್ಯವಸ್ಥೆ.
10. ಅಂತರ್ವೇಶನ ಶಿಕ್ಷಣವನ್ನು ಅನುವು ಮಾಡಿಕೊಡುವುದು : ಪ.ಜಾತಿ, ಪ.ಪಂಗಡ, ಹೆಣ್ಣು ಮಕ್ಕಳು, ಅಲ್ಪಸಂಖ್ಯಾತರು ಹಾಗೂ ವಿಶೇಷ ಅಗತ್ಯವುಳ್ಳ ಮಕ್ಕಳನ್ನೊಳಗೊಂಡ ಶಿಕ್ಷಣ.
11. ಭಾಷೆಗಳನ್ನು ಅಭಿವೃದ್ಧಿಗೊಳಿಸುವುದು.
12. ಸಮಗ್ರ ಶಿಕ್ಷಣ – ಮೌಲ್ಯಗಳು, ದೈಹಿಕ ಶಿಕ್ಷಣ, ಕಲೆ ಮತ್ತು ಕರಕುಶಲ ಶಿಕ್ಷಣ, ಜೀವನ ಕೌಶಲಗಳು.
13. ಮಕ್ಕಳ ಆರೋಗ್ಯದೆಡೆ ಕೇಂದ್ರೀಕರಣ.

## 1. ಪ್ರಾಥಮಿಕ ಶಾಲೆಯಲ್ಲಿ ಕಲಿಕೆಯ ಪರಿಣಾಮವನ್ನು ಖಚಿತಪಡಿಸುವುದು.

ಪ್ರಾಥಮಿಕ ಶಿಕ್ಷಣದಲ್ಲಿ ಶಾಲಾ ಲಭ್ಯತೆ ಹಾಗೂ ಶಾಲೆಯಲ್ಲಿ ಉಳಿಯುವಿಕೆಯಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದ್ದರೂ, ಹೆಚ್ಚಿನ ಮಕ್ಕಳಲ್ಲಿ ಕಲಿಕಾ ಫಲಿತಾಂಶದಲ್ಲಿ ಹಿಂದುಳಿಯುವಿಕೆ ಅತ್ಯಂತ ಕಾಳಜಿವಹಿಸುವ ಗಂಭೀರ ವಿಷಯವಾಗಿದೆ. ಶಾಲಾ ಅವಧಿಯಲ್ಲಿ ಮಕ್ಕಳು ಮೂಲಭೂತ ಕೌಶಲಗಳನ್ನು ಸಹ ಕಲಿಯುತ್ತಿಲ್ಲ ಎಂಬುದನ್ನು ಅಧ್ಯಯನಗಳು ತೋರಿಸಿಕೊಟ್ಟಿವೆ. 5ನೇ ತರಗತಿಯವರೆಗೆ ಓದಿರುವ ಮಕ್ಕಳು ಸರಳ ಪಠ್ಯವನ್ನು ಸರಿಯಾಗಿ ಓದುವುದಾಗಲಿ, ಸರಳ ಗಣಿತದ ಲೆಕ್ಕಗಳನ್ನು ಮಾಡಲು ಅಸಹಾಯಕರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವು ಬಹಳ ಕಳಪೆಯಾಗಿರುತ್ತದೆ. 8 ವರ್ಷಗಳ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಎಲ್ಲಾ ಮಕ್ಕಳು ಕನಿಷ್ಠ ಕೌಶಲಗಳ ಅರಿವನ್ನು ಪಡೆಯುವುದನ್ನು ಖಚಿತ ಪಡಿಸುವುದರ ಬಗ್ಗೆ ಸೂಕ್ತ ಪ್ರಯತ್ನದ ಅಗತ್ಯವಿದೆ.

ಅನೇಕ ರಾಜ್ಯಗಳು ಪ್ರಾಥಮಿಕ ಶಿಕ್ಷಣದಲ್ಲಿ ಆರಂಭಿಕ ಶ್ರೇಣಿಯ ಓದುವಿಕೆ, ಬರೆಯುವಿಕೆ, ಗ್ರಹಿಸುವಿಕೆ, ಗಣಿತ ಕಾರ್ಯಕ್ರಮಗಳಲ್ಲಿ ನವೀಕರಣ ತಂದು, ಕಲಿಕಾ ಫಲಿತಾಂಶವನ್ನು (ಸಾಧನೆ) ಅಳೆಯುವ ಹಾಗೂ ವ್ಯಾಖ್ಯಾನಿಸುವ ವಿಧಾನವನ್ನು ಅನುಷ್ಠಾನಗೊಳಿಸಿರುತ್ತಾರೆ. ಎನ್.ಸಿ.ಇ.ಆರ್.ಟಿ. ಸಂಸ್ಥೆಯು 3, 5 ಮತ್ತು 7/8 ಇನೇ ತರಗತಿಗಳ ಮೂರು ಸುತ್ತಿನ ರಾಷ್ಟ್ರೀಯ ಮಟ್ಟದ ಸಾಧನ ಸಮೀಕ್ಷೆಯನ್ನು ಪೂರ್ಣಗೊಳಿಸಿರುತ್ತದೆ. ರಾಜ್ಯಮಟ್ಟದ ಸಾಧನೆ ಸಮೀಕ್ಷೆಯನ್ನು ನಡೆಸಲು ರಾಜ್ಯಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಹಾಗೂ ರಾಜ್ಯಗಳು ಸಮೀಕ್ಷೆಯನ್ನು ನಡೆಸುತ್ತಿದ್ದು, ಅವು ವಿವಿಧ ಹಂತದಲ್ಲಿದ್ದು, ಇನ್ನೂ ಕೆಲವು ಸುತ್ತಿನ ಸಮೀಕ್ಷೆಯನ್ನು ನಡೆಸಬೇಕಾಗಿದೆ.

ಪ್ರಾಥಮಿಕ ಶಿಕ್ಷಣದಲ್ಲಿ ಇಷ್ಟೆಲ್ಲಾ ಸುಧಾರಣೆಗಳನ್ನು ಮಾಡಿದರೂ ಸಹ, ಬೋಧನೆ-ಕಲಿಕೆಯನ್ನು ಸುಧಾರಿಸಲು ವಿವಿಧ ವಿಧಾನಗಳನ್ನು ಅನ್ವೇಷಿಸುವ ಅಗತ್ಯವಿದೆ. ಪ್ರಾಥಮಿಕ ಶಿಕ್ಷಣದಲ್ಲಿ ಕಡಿಮೆ ಮಟ್ಟದ ಗುರಿ ಸಾಧನೆಗೆ ಕಾರಣಗಳನ್ನು ಗುರ್ತಿಸುವ ಅಗತ್ಯವಿದೆ. ಪ್ರಾಥಮಿಕ ಶಿಕ್ಷಣದಲ್ಲಿ ಗುಣಮಟ್ಟವನ್ನು ಸುಧಾರಿಸಲು ಈಗಿರುವ ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ವ್ಯವಸ್ಥೆಯನ್ನು ಮೌಲ್ಯಮಾಪನ ಮಾಡಿ, ಉತ್ತಮವಾದ ವಿಧಾನಗಳನ್ನು ಶಿಫಾರಸ್ಸು ಮಾಡಬೇಕಾಗಿರುತ್ತದೆ. ಮಕ್ಕಳ ಕಲಿಕೆಯ ಫಲಿತಾಂಶದ ಮೇಲೆ ಪರಿಣಾಮ ಬೀರುವ, ಗುಣಮಟ್ಟದ ವಿಷಯಗಳು ಮತ್ತು ತರಬೇತಿ ಹೊಂದಿದ ಶಿಕ್ಷಕರ ಲಭ್ಯತೆ, ಉತ್ತಮ ಪಠ್ಯಕ್ರಮ ಹಾಗೂ ನಾವಿನ್ಯಯುತ ಶಿಕ್ಷಣಶಾಸ್ತ್ರಗಳ ಅವಶ್ಯಕತೆಯನ್ನು ಅತಿ ಪ್ರಾಮುಖ್ಯವೆಂದು ಪರಿಗಣಿಸುವ ಅವಶ್ಯಕತೆಯಿದೆ.

- ಶಾಲೆಯಲ್ಲಿ ನಿಮ್ಮ ಮಗುವಿನ ಕಡಿಮೆ ಸಾಧನೆಗೆ ನಿಮ್ಮ ದೃಷ್ಟಿಯಲ್ಲಿ ಕಾರಣಗಳೇನು?
- ಶಾಲೆಯಲ್ಲಿ ಮಗು ಮೂಲ ಭಾಷೆಯ ಬಳಕೆ ಹಾಗೂ ಸಂಖ್ಯೆ ಕೌಶಲ್ಯಗಳನ್ನು ಕಲಿತಿರುವ ಬಗ್ಗೆ ಹೇಗೆ ಖಾತರಿ ಪಡಿಸಿಕೊಳ್ಳುವುದು?
- ಸಮಯಕ್ಕೆ ಸರಿಯಾಗಿ ಶಿಕ್ಷಕರ ಲಭ್ಯತೆಯನ್ನು ಮಾಪನ ಮಾಡಲು ತಂತ್ರಜ್ಞಾನವನ್ನು ಹೇಗೆ ಬಳಸಿಕೊಳ್ಳಬೇಕು?
- 1 ಮತ್ತು 2ನೇ ತರಗತಿಗೆ ಸಮರ್ಪಣಾ ಮನೋಭಾವ ಹೊಂದಿರುವ ಶಿಕ್ಷಕರ ಅಗತ್ಯವಿದೆಯೇ?
- ಶಾಲೆಯ ಪ್ರಾರಂಭಿಕ ಹಂತದಲ್ಲಿ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಅಭಿವೃದ್ಧಿಗೊಳಿಸಲು ಯಾವ ರೀತಿಯ ತರಬೇತಿಯನ್ನು ಶಿಕ್ಷಕರ ತರಬೇತಿಯಲ್ಲಿ ಸೇರಿಸುವ ಅಗತ್ಯವಿದೆ?
- ಶಿಕ್ಷಕರು, ಮಕ್ಕಳು, ಪೋಷಕರನ್ನು ಪ್ರಾಥಮಿಕ ಶಾಲೆಗೆ ಸೆಳೆಯಲು ವಿಶೇಷ ಕ್ರಮಗಳ ಅವಶ್ಯಕತೆ ಇದೆಯೇ? ಉದಾ: ಬಣ್ಣ ಬಣ್ಣದ ಪೀಠೋಪಕರಣ, ಆಟದ ಸಾಮಗ್ರಿಗಳು, ಚಾರ್ಟ್‌ಗಳು, ಚಿತ್ರಗಳು, ನೆಲಹಾಸುಗಳು ಇತ್ಯಾದಿ.
- ಶಿಕ್ಷಣದ ಪ್ರಾಥಮಿಕ ಹಂತದಲ್ಲಿಯೇ ಆಟಗಳು, ಕಲೆ ಹಾಗೂ ಆತ್ಮಸ್ಥೈರ್ಯವನ್ನು ಬೆಳಸುವ ಕಾರ್ಯಕ್ರಮಗಳನ್ನು ಪರಿಚಯಿಸಬೇಕೆಂದು ನೀವು ಆಲೋಚಿಸುತ್ತೀರ?
- ವಿಧ್ಯಾರ್ಥಿ ಮೌಲ್ಯಮಾಪನಕ್ಕೆ ಎಂತಹ ವ್ಯವಸ್ಥೆ ಇರಬೇಕು?
- ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮಕ್ಕಳು ಎಷ್ಟು ಭಾಷೆಗಳನ್ನು ಅಭ್ಯಸಿಸುವ ಅವಕಾಶ ಇರಬೇಕು?
- ನಮ್ಮ ದೇಶದಲ್ಲಿ ನಾಯಿಕೊಡೆಗಳಂತೆ ತಲೆ ಎತ್ತಿರುವ ಪೂರ್ವ ಪ್ರಾಥಮಿಕ / ಪ್ಲೇ ಶಾಲೆಗಳನ್ನು ನಾವು ಹೇಗೆ ಪರಿಗಣಿಸಬೇಕು?
- ಯಾವ ಕ್ಷೇತ್ರದಲ್ಲಿ ಅಂತರಾಷ್ಟ್ರೀಯ ಪಾಲುದಾರಿಕೆಯನ್ನು ರಾಜ್ಯವು ನಿರೀಕ್ಷಿಸುತ್ತದೆ ಎಂಬುದರ ಬಗ್ಗೆ ಹೆಚ್ಚಿನ ಮಾಹಿತಿ.

2. **ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣವನ್ನು ವಿಸ್ತರಿಸುವುದು. :**

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಪೂರ್ಣಗೊಳಿಸುತ್ತಿರುವ ಸತ್ಯತೆಯೊಂದಿಗೆ, ಪ್ರೌಢಶಿಕ್ಷಣವನ್ನು ಸಾರ್ವತ್ರೀಕರಣದೆಡೆಗೆ ಕೊಂಡೊಯ್ಯುವುದು ತಾರ್ಕಿಕವಾಗಿ ಮುಂದಿನ ಹೆಜ್ಜೆ. ಮುಂದುವರೆದಂತೆ, ಗುಣಮಟ್ಟ ಪ್ರೌಢಶಿಕ್ಷಣ ಸಾರ್ವತ್ರೀಕರಣವು, ವ್ಯಾಖ್ಯಾನಿಸಿದ ಗುಣಮಟ್ಟವನ್ನೊಳಗೊಂಡು ವ್ಯಾಖ್ಯಾನಿಸುವುದು, ಸ್ಥಳದ ಲಭ್ಯತೆಯ ತಾರತಮ್ಯವಿಲ್ಲದೇ, 8 ಮತ್ತು 10ನೇ ತರಗತಿಗೆ ಮಕ್ಕಳು ಸೇರಲು ಆಡಳಿತಾತ್ಮವಾಗಿ ಅನುವು ಮಾಡಿಕೊಡುವುದನ್ನು ಪ್ರೌಢ ಮತ್ತು ಉನ್ನತ ಶಿಕ್ಷಣವು ಒಳಗೊಂಡಿರುತ್ತದೆ. 8 ವರ್ಷಗಳ ಮಕ್ಕಳ ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆಯಂತಹ ಅನುಷ್ಠಾನಗಳಿಂದ ಪ್ರಾಥಮಿಕ ಶಿಕ್ಷಣದಲ್ಲಿ ಭಾಗವಹಿಸುವಿಕೆ ಹೆಚ್ಚಾಗಿರುವುದಲ್ಲದೆ, ಮುಂಬರುವ ವರ್ಷಗಳಲ್ಲಿ ಪ್ರೌಢಶಿಕ್ಷಣದ ಆಂತರಿಕ ಸಾಮರ್ಥ್ಯವನ್ನು ಬಲವರ್ಧಿಸಿ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯನ್ನು ಖಾತ್ರಿ ಪಡಿಸಿಕೊಳ್ಳಬೇಕು. ಮುಂದುವರೆದಂತೆ, ಸೌಲಭ್ಯವಂಚಿತ ಗುಂಪುಗಳ ಮಕ್ಕಳು ಶಾಲೆಯಲ್ಲಿ ಉಳಿಯುವಿಕೆಯ ದರದಲ್ಲಿ ಹಾಗೂ ಮುಂದುವರಿಕೆಯ ದರದಲ್ಲಿನ , ವೃದ್ಧಿಗಳು ಪ್ರೌಢಶಿಕ್ಷಣದ ಅಗತ್ಯತೆಯನ್ನು ಇನ್ನೂ ಖಚಿತಪಡಿಸಿದೆ ಹಾಗೂ ಪ್ರೌಢಶಾಲೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳ ದಾಖಲಾತಿಯನ್ನು ಮಾಡಿಕೊಳ್ಳುವು.

ವಿವಿಧ ಪ್ರೌಢಶಾಲಾ ಸಂಸ್ಥೆಗಳಲ್ಲಿ ಅನೇಕ ಕೇಂದ್ರ ಪುರಸ್ಕೃತ ಯೋಜನೆಗಳ ವ್ಯಾಪಕ ಅನುಷ್ಠಾನವು ಹೆಚ್ಚಿನ ಭೌಗೋಳಿಕ ಪ್ರದೇಶಗಳನ್ನು ಒಳಪಡಿಸಿ, ಸಾಮಾಜಿಕ ಮತ್ತು ಲಿಂಗ ಸಮನ್ವಯತೆ ಮತ್ತು ಐ.ಸಿ.ಟಿ.ಯ ಬಳಕೆಯಿಂದ ಗುಣಮಟ್ಟದ ಶಿಕ್ಷಣವನ್ನು ಖಾತರಿ ಪಡಿಸುತ್ತಿದೆ. ಪ್ರೌಢಶಾಲಾ ಹಂತದ ಅನೇಕ ವಿಷಯಗಳು ಹಾಗೂ ಗುಣಮಟ್ಟದ ಶಿಕ್ಷಣವನ್ನು ಅನುಷ್ಠಾನಗೊಳಿಸಲು ಆರ್.ಎಂ.ಎಸ್.ಎ. ಯೋಜನೆಯೊಂದೇ ಸಮಗ್ರವಾಗಿ ರೂಪಿಸಿದ ಯೋಜನೆಯಗಾಗಿದೆ.

- 14–18ರ ವಯೋಮಾನದ ಮಕ್ಕಳಿಗೆ ಎಷ್ಟರ ಮಟ್ಟಿಗೆ ಗುಣಮಟ್ಟದ ಶಿಕ್ಷಣ, ಶಾಲಾ ಲಭ್ಯತೆ ಹಾಗೂ ಕೈಗೆಟುವ ಶಿಕ್ಷಣವನ್ನು ನೀಡಲಾಗುತ್ತಿದೆ. ಇದನ್ನು ಅನುಷ್ಠಾನಗೊಳಿಸದೆ, ಸಮಾಜ ಹಾಗೂ ಹಣಕಾಸಿನ ಮೇಲೆ ಬೀರುವ ಪರಿಣಾಮ ಏನು?

- ಯಾವುದೇ ಮಗು ಶಿಕ್ಷಣದಿಂದ ವಂಚಿತವಾಗದೇ ಸಂಪೂರ್ಣ ಶಾಲಾ ಶಿಕ್ಷಣವನ್ನು ಮುಗಿಸುವ ಅವಕಾಶವನ್ನು ನಮ್ಮ ದೇಶದಲ್ಲಿ ನೀಡಲು ಯಾವ ರೀತಿ ಪ್ರೌಢಶಿಕ್ಷಣ ಲಭ್ಯತೆಯನ್ನು ಹೆಚ್ಚಿಸಬಹುದು?
- ಪ್ರೌಢಶಾಲಾ ಹಂತದಲ್ಲಿ ಭೌಗೋಳಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ಯಾವ ರೀತಿಯಲ್ಲಿ ಪರಿಹರಿಸಬಹುದು?
- ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಮಕ್ಕಳು ಹೆಚ್ಚಾಗಿ ತೊಡಗಿಸಿಕೊಳ್ಳುವುದನ್ನು ಯಾವ ರೀತಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ?
- ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಉತ್ತಮ ವಿದ್ಯಾರ್ಹತೆ ಹೊಂದಿದ ಶಿಕ್ಷಕರ ಲಭ್ಯತೆಯ ಕೊರತೆಯನ್ನು ಯಾವ ರೀತಿ ಹೋಗಲಾಡಿಸಬಹುದು? ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ವಿಜ್ಞಾನ ಮತ್ತು ಗಣಿತ ಶಿಕ್ಷಕರ ಶೈಕ್ಷಣಿಕ ಅಗತ್ಯತೆಯನ್ನು ಪೂರೈಸಲು ಯಾವ ರೀತಿ ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆಯನ್ನು ಬಳಸಿಕೊಳ್ಳಬಹುದು?
- ಕಲಿಕಾ ಬೋಧನಾ ಪ್ರಕ್ರಿಯೆಯನ್ನು ಪ್ರೌಢ ಮತ್ತು ಪದವಿ ಪೂರ್ವ ಶಾಲೆಗಳಲ್ಲಿ ಉತ್ತಮಗೊಳಿಸಲು ಯಾವ ಹಂತದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು (ಐ.ಸಿ.ಟಿ.ಯನ್ನು) ಬಳಸಿಕೊಳ್ಳಬಹುದು?
- ಪ್ರೌಢಸಲಾ ಹಂತದ ಮಕ್ಕಳಲ್ಲಿ ಸಮಸ್ಯೆಗಳ ಪರಿಹರಿಸುವಿಕೆ ಮತ್ತು ನಿರ್ಣಾಯಕ ತರಬೇತಿಯನ್ನು ಅಭ್ಯಸಿಸಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಲು ಯಾವ ರೀತಿಯ ಮೌಲ್ಯಮಾಪನ ವ್ಯವಸ್ಥೆಯನ್ನು ಅಪೇಕ್ಷಿಸುತ್ತೀರಿ?
- ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣದ ಪಠ್ಯಪುಸ್ತಕವನ್ನು ಅಭಿವೃದ್ಧಿ ಪಡಿಸುವ ಅಥವಾ ಮಾರ್ಪಡಿಸುವ ಅಗತ್ಯವಿದೆಯೇ?
- ಶಿಕ್ಷಕರ ಕಾರ್ಯನಿರ್ವಹಣೆಯನ್ನು ಸುಧಾರಿಸುವ ಯಾವ ಕ್ರಮದ ಅವಶ್ಯಕತೆ ಇದೆ?
- ಪ್ರೌಢ / ಪದವಿ ಪೂರ್ವ ಮಟ್ಟದಲ್ಲಿ ಎಷ್ಟು ಭಾಷೆಗಳನ್ನು ಬೋಧಿಸಬೇಕು?
- ಪ್ರೌಢ ಹಾಗೂ ಪದವಿ ಪೂರ್ವ ಹಂತದಲ್ಲಿ ಸರ್ಕಾರ–ಖಾಸಗಿ ಸಹಭಾಗಿತ್ವವನ್ನು ವಿಸ್ತರಿಸಬೇಕೇ? ಇದು ಕಾರ್ಯಸಾಧ್ಯವೇ?
- ಮಾಹಿತಿ ಮತ್ತು ತಂತ್ರಜ್ಞಾನ ಚಟುವಟಿಕೆಗಳ ಮೂಲಕ ಕ್ಷೇತ್ರ ಭೇಟಿ, ಪ್ರಾಯೋಗಿಕ ಶಿಕ್ಷಣ ಮುಂತಾದುವನ್ನು ಹೆಚ್ಚಿಸಲು ಯಾವ ರೀತಿ ಸಾಧ್ಯವಿದೆ?

3. **ವೃತ್ತಿಪರ ಶಿಕ್ಷಣವನ್ನು ಬಲಗೊಳಿಸುವುದು.**

ದೇಶದ ಅಭಿವೃದ್ಧಿಯಲ್ಲಿ ಜ್ಞಾನಪೂರಿತ ಹಾಗೂ ನುರಿತ ಕಾರ್ಯಪಡೆಯ ಮಾನವ ಸಮೂಹವು ಅತ್ಯಗತ್ಯವಾದ ಸಂಪನ್ಮೂಲವಾಗಿದೆ. ವ್ಯಕ್ತಿಯ ಉತ್ಪಾದಕತೆ, ಉದ್ಯೋಗದಾತರ ಲಾಭ ಮತ್ತು ರಾಷ್ಟ್ರದ ಅಭಿವೃದ್ಧಿಯನ್ನು ಉತ್ತಮ ಪಡಿಸುವಲ್ಲಿ ವೃತ್ತಿ ಶಿಕ್ಷಣ ಮತ್ತು ಕೌಶಲ ಅಭಿವೃದ್ಧಿಯು ಪ್ರಮುಖ ಪಾತ್ರ ವಹಿಸುತ್ತದೆ. ವಿವಿಧ ಶಿಕ್ಷಣದ ಮೂಲಕ, ಅಸಂಘಟಿತ ವಲಯದಲ್ಲಿ ಅಗತ್ಯವಿರುವ ಕೌಶಲ ಮಾನವ ಸಂಪನ್ಮೂಲವನ್ನು ಅಭಿವೃದ್ಧಿ ಪಡಿಸುವುದು ವೃತ್ತಿ ಶಿಕ್ಷಣದ ಗುರಿಯಾಗಿದೆ ಹಾಗೂ ವಿವಿಧ ವೃತ್ತಿ ಶಿಕ್ಷಣ ವಿಷಯಗಳ ಮೂಲಕ ಮಕ್ಕಳನ್ನು ಸ್ವಯಂ ಉದ್ಯೋಗದ ಆಸಕ್ತಿಗೆ ತರುವುದೇ ಆಗಿದೆ. ಶೇಕಡಾ 7 ರಿಂದ 10 ಪ್ರತಿಶತ ಜನಸಂಖ್ಯೆ ಮಾತ್ರ ಔಪಚಾರಿಕ ವಲಯದ ಹಣಕಾಸು ವೃದ್ಧಿಯಲ್ಲಿ ಭಾಗವಹಿಸಿದೆ. ವೃತ್ತಿ ಶಿಕ್ಷಣದ ಅಭಿವೃದ್ಧಿಯು ಅನೌಪಚಾರಿಕ ವಲಯದಲ್ಲಿ ಕೌಶಲವುಳ್ಳ ಕೆಲಸಗಾರರನ್ನು ಸಿದ್ಧಗೊಳಿಸುತ್ತಿದ್ದು, ಇದು ಉತ್ಪಾದನೆಯ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಅನೇಕ ಸಮಿತಿಗಳು ಕೂಡ ವೃತ್ತಿ ಶಿಕ್ಷಣದ ಲಭ್ಯತೆ ಮತ್ತು ಭಾಗವಹಿಸುವಿಕೆಯ ಅಗತ್ಯತೆಯನ್ನು ಒತ್ತಿ ಹೇಳಿದೆ ಹಾಗೂ ಶಿಕ್ಷಣ ವ್ಯವಸ್ಥೆಯ ಮುಖ್ಯವಾಹಿನಿಯಲ್ಲಿ ವೃತ್ತಿ ಶಿಕ್ಷಣದ ಹೊಂದಾಣಿಕೆಯನ್ನು ಶಿಫಾರಸ್ಸು ಮಾಡಿದೆ.

ಭಾರತದಲ್ಲಿ ವೃತ್ತಿ ಶಿಕ್ಷಣ ಹಾಗೂ ಸಾಮಾನ್ಯ ಶಿಕ್ಷಣವು ಎರಡು ವಿವಿಧ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ ಹಾಗೂ ಎರಡರ ನಡುವೆ ಬಹಳ ಕಡಿಮೆ ಮಟ್ಟದ ಪರಸ್ಪರ ಹೊಂದಾಣಿಕೆಯಿದೆ. ಇದು ವಿದ್ಯಾರ್ಥಿಗಳಲ್ಲಿ ವೃತ್ತಿ ಶಿಕ್ಷಣವನ್ನು ಆರಿಸಿಕೊಳ್ಳಲು ಹಿಂಜರಿಕೆಯನ್ನುಂಟು ಮಾಡಿದೆ ಹಾಗೂ ಸಾಮಾನ್ಯವಾಗಿ ವೃತ್ತಿ ಶಿಕ್ಷಣ ಮಾಡಿದ ವಿಧ್ಯಾರ್ಥಿಯು ಉನ್ನತ ಶಿಕ್ಷಣ ಮಾಡಲು ಸಾಧ್ಯವಿಲ್ಲ ಎಂಬ ಭಾವನೆಯನ್ನು ಮೂಡಿಸಿದೆ. ಉದ್ಯಮದಲ್ಲಿನ ದುರ್ಬಲತೆ, ಉದ್ಯಮದಲ್ಲಿ ಯೋಜನೆ ಮತ್ತು ಅನುಷ್ಠಾನ, ಚಲನಶೀಲತೆಯಲ್ಲಿನ ಕೊರತೆ, ಅಗತ್ಯ ಶಿಕ್ಷಣ, ಮತ್ತು ಪಠ್ಯಕ್ರಮವಲ್ಲದೇ, ವೃತ್ತಿ ಶಿಕ್ಷಣ ಶಿಕ್ಷಕರ ಅಭಾವವನ್ನು ತಡೆಗಟ್ಟಲು 2014ರಲ್ಲಿ ಪ್ರೌಢಶಿಕ್ಷಣದಲ್ಲಿನ ವೃತ್ತಿ ಶಿಕ್ಷಣ ವ್ಯವಸ್ಥೆಯನ್ನು ಪರಿಷ್ಕರಿಸಲಾಯಿತು. ವೃತ್ತಿ ಶಿಕ್ಷಣ ಕಾರ್ಯಕ್ರಮದ ಸಮಗ್ರ ಚೌಕಟ್ಟನ್ನು ಸಿದ್ಧಪಡಿಸಲು ಡಿಸೆಂಬರ್, 2013ರಲ್ಲಿ ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟಿನ (NSQF)ಅಧಿಸೂಚನೆಯನ್ನು ಹೊರಡಿಸಲಾಯಿತು. ಪ್ರೌಢಶಾಲೆಯಲ್ಲಿ ಶಿಕ್ಷಣದ ಜೊತೆಗೆ ವೃತ್ತಿ ಶಿಕ್ಷಣವನ್ನು ಸಂಯೋಜಿಸಲು ಹೆಚ್ಚಿನ ಒತ್ತು ಕೊಡಲಾಗಿದೆ. ಇದು ಶಿಕ್ಷಣ ವ್ಯವಸ್ಥೆಯಲ್ಲಿ ಕೌಶಲ

ಅಭಿವೃದ್ಧಿಯನ್ನು ಪುನರುಜ್ಜೀವನ ಮಾಡುವುದಲ್ಲದೇ ಎಲ್ಲಾ ಹಂತದ ಪಠ್ಯಕ್ರಮದಲ್ಲಿ ಒಂದು ಸಂಯೋಜಿತ ಭಾಗವಾಗಿದೆ.

- ಕೌಶಲಾಧಾರಿತ ವೃತ್ತಿ ಶಿಕ್ಷಣವು ಮಕ್ಕಳಿಗೆ ಉದ್ಯೋಗ ದೊರೆಕಿಸುವಲ್ಲಿ ಸಹಾಯ ಮಾಡುವುದೇ?
- ಶಾಲೆಗಳಲ್ಲಿ ವೃತ್ತಿ ಶಿಕ್ಷಣದ ಅನುಷ್ಠಾನದಲ್ಲಿ ಅನುಭವಿಸಿದ ಕಷ್ಟಗಳೇನು?
- ವೃತಿ ಶಿಕ್ಷಣ ಶಿಕ್ಷಕರ ಲಭ್ಯತೆ ಮತ್ತು ತರಬೇತಿಯಲ್ಲಿ ಇರುವ ಸಮಸ್ಯೆಗಳು ಯಾವುವು?
- ಕೆಲವು ರಾಜ್ಯಗಳಲ್ಲಿ ಸಾಮಾನ್ಯ ಶಿಕ್ಷಣದಲ್ಲಿ ವೃತ್ತಿ ಶಿಕ್ಷಣವನ್ನು ಯಶಸ್ವಿಯಾಗಿ ಸಂಯೋಜಿಸಲಾಗಿದೆ. ಇದನ್ನು ಯಾವ ರೀತಿಯಲ್ಲಿ ಅಳವಡಿಸಿಕೊಳ್ಳಬಹುದು ಅಥವಾ ಎಲ್ಲಾ ರಾಜ್ಯಗಳಲ್ಲಿ ಇದನ್ನು ಅಳವಡಿಸಬಹುದು?
- ವೃತ್ತಿ ಶಿಕ್ಷಣದ ಮುಖ್ಯ 5 ಅಥವಾ 6 ವಿಷಯಗಳನ್ನು 12ನೇ ತರಗತಿಯ ಅಂಕಗಳೊಡನೆ ಸೇರಿಸಬೇಕೆ ಅಥವಾ 10ನೇ ತರಗತಿಯ ಅಂಕಗಳೊಡನೆ ಸೇರಿಸಬೇಕೆ?
- ಮಕ್ಕಳಲ್ಲಿ ವೃತ್ತಿ ಶಿಕ್ಷಣವನ್ನು ಜನಪ್ರಿಯಗೊಳಿಸಲು ಯಾವ ಕ್ರಮ ಕೈಗೊಳ್ಳಬೇಕು?
- ಉತ್ಪಾದನೆ ವಲಯ ಆಧಾರಿತ ವಿಷಯಗಳ ಬದಲು ಸೇವಾ ವಲಯ ವಿಷಯಗಳನ್ನು ಪಠ್ಯಕ್ರಮದಲ್ಲಿ ಸೇರಿಸಬೇಕೆ?
- ಮಕ್ಕಳಿಗೆ ಉದ್ಯೋಗ ಹಾಗೂ ಜ್ಞಾನ ಆಧಾರಿತವಾದ ಮಿಶ್ರಣವಾದ ವೃತ್ತಿ ಪರ ವಿಷಯಗಳಾದ ವಿಜ್ಞಾನ, ಗಣಿತ, ಅಕೌಂಟಿಂಗ್, ಕಂಪ್ಯೂಟರ್, ಇತಿಹಾಸ, ಭೂಗೋಳ ಇವುಗಳನ್ನು ವೃತ್ತಿ ಶಿಕ್ಷಣದಲ್ಲಿ ಅಳವಡಿಸಬೇಕೇ?
- ಕ್ರಾಫ್ಟ್, ಕಾರ್ಖಾನೆ, ಸೇವೆ ಮುಂತಾದ ವಿಷಯಗಳಲ್ಲಿ ಮಕ್ಕಳಿಗೆ ಒಲವು ಇರುವ ಬಗ್ಗೆ ತಿಳಿದುಕೊಳ್ಳಲು ಹಾಗೂ ಕೌಶಲಗಳ ಗುರ್ತಿಸುವಿಕೆ ಮತ್ತು ಶಾಲೆಯಲ್ಲಿ ಮಗುವು ಸಾಗಬೇಕಾದ ದಾರಿಯನ್ನು ಗುರ್ತಿಸಲು ಸಮಾಲೋಚನೆ (ಕೌನ್ಸಿಲಿಂಗ್) ಇರಬೇಕೆ? ಹೌದು ಎಂದಾದರೆ ಯಾವ ಹಂತದಲ್ಲಿ (ತರಗತಿಯಲ್ಲಿ)?

**4. ಶಾಲೆಯ ಪರೀಕ್ಷಾ ವಿಧಾನದಲ್ಲಿ ಸುಧಾರಣೆ ತರುವುದು.**

ಮೌಲ್ಯಮಾಪನ ಸುಧಾರಣೆಯು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದಲ್ಲಿ ಸಮಸ್ಯೆ ಬಗೆಹರಿಸುವ ವಿಧಾನ, ಚಿಂತನೆಯ ನಿರ್ಣಾಯಕತೆ ಮತ್ತು ತಾರ್ಕಿಕ ಕೌಶಲ್ಯಗಳ ಅಭಿವೃದ್ಧಿ ಆಗಬೇಕಿದೆ. ಇಂತಹ ಸುಧಾರಣೆಗಳು ಕಲಿಕಾ-ಬೋಧನಾ ಪ್ರಕ್ರಿಯೆಯಲ್ಲಿ ಬದಲಾವಣೆ ತರುತ್ತದೆ ಮತ್ತು ಕಲಿಕಾ ಫಲಿತಾಂಶವನ್ನು ಅಭಿವೃದ್ಧಿ ಪಡಿಸುತ್ತದೆ. ಸಿ.ಬಿ.ಎಸ್.ಇ.ಗೆ ಸಂಬಂಧಿಸಿದ ಶಾಲೆಗಳಲ್ಲಿ ಮೌಲ್ಯಮಾಪನದಲ್ಲಿ ವ್ಯಾಪಕವಾದ ಸುಧಾರಣೆಯನ್ನು ತರಲಾಗಿದೆ. ಅಂದರೆ, 10ನೇ ತರಗತಿಯಲ್ಲಿ ಬೋರ್ಡ್ ಪರೀಕ್ಷೆಯನ್ನು ಬರೆಯುವುದನ್ನು ಐಚ್ಛಿಕವನ್ನಾಗಿ ಮಾಡಲಾಗಿದೆ ಹಾಗೂ ಅಂಕಗಳ ಬದಲು ಗ್ರೇಡ್ ಸಿಸ್ಟಂ ತರಲಾಗಿದೆ.

ಮಕ್ಕಳ ಸಮಗ್ರ ಅಭಿವೃದ್ಧಿಯ ಮೌಲ್ಯಮಾಪನಕ್ಕಾಗಿ ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಸಿ.ಸಿ.ಇ. ಅನುಷ್ಠಾನ ಮಾಡಲು ಮೊದಲು ತರಗತಿಯಲ್ಲಿ ಮಗುವಿನ ವಿವರ ಮತ್ತು ಸಂಚಿತ ದಾಖಲೆಗಳ ಸಿದ್ಧತೆಯಂತಹ ಅನೇಕ ಚಟುವಟಿಕೆಗಳನ್ನು ಮಾಡಬೇಕಾಗುತ್ತದೆ. ವಿವಿಧ ಚಟುವಟಿಕೆಗಳಾದ ಮೌಲ್ಯಮಾಪನದ ಮಟ್ಟ, ಮಕ್ಕಳನ್ನು ಮೌಲ್ಯಮಾಪನ ಮಾಡಲು ಮಕ್ಕಳನ್ನು ವೀಕ್ಷಿಸುವುದು, ತರಗತಿ ಕೊಠಡಿಯಲ್ಲಿ ಪ್ರಶ್ನಿಸುವುದು, ಬೋಧನಾ-ಕಲಿಕೆಯನ್ನು ಅಭಿವೃದ್ಧಿ ಪಡಿಸಲು ಮಾಹಿತಿಯನ್ನು ಸಂಗ್ರಹಿಸುವುದು ಮತ್ತು ಉಪಯೋಗಿಸುವುದು, ಪರಿಹಾರ ಬೋಧನೆಗೆ ವಿಷಯಗಳು ಮುಂತಾದ ಪ್ರಕ್ರಿಯೆಯನ್ನು ಒಳಗೊಂಡಿರುತ್ತದೆ. ಸಿ.ಸಿ.ಇ.ಅಡಿಯಲ್ಲಿ ಮಕ್ಕಳ ಕಲಿಕಾ ಪ್ರಕ್ರಿಯೆಯನ್ನು ಪೋಷಕರ ಸಭೆಗಳ ಮೂಲಕ ಪೋಷಕರೊಡನೆ ಹಂಚಿಕೊಳ್ಳುವುದೂ ಒಳಗೊಂಡಿದೆ.

ರಾಜ್ಯ ಪರೀಕ್ಷಾ ಮಂಡಳಿಗಳೂ ಕೂಡ ಪಠ್ಯಕ್ರಮ ಹಾಗೂ ಪರೀಕ್ಷಾ ಪದ್ಧತಿಗಳನ್ನು ಸುಧಾರಿಸಲು ಕ್ರಮ ಕೈಗೊಂಡಿವೆ. ಆದರೂ ಪರೀಕ್ಷಾ ಕ್ರಮದಲ್ಲಿ ಇನ್ನೂ ಸಮಸ್ಯೆಗಳಿದೆ. ಪ್ರಸ್ತುತ ಪರೀಕ್ಷಾ ಪದ್ಧತಿಯನ್ನು ಪುನ: ಪರಿಶೀಲಿಸಬೇಕಾಗಿದೆ ಮತ್ತು ಪರಿಷ್ಕರಿಸಬೇಕಾಗಿದೆ.

- ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಅನುಷ್ಠಾನದಲ್ಲಿ ಸರ್ಕಾರಿ ಶಾಲೆಗಳಲ್ಲಿನ ಅನುಭವಗಳೇನು?

- ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಸಿ.ಸಿ.ಇ. ಸಹಕಾರಿಯಾಗಿದೆಯೇ?
- ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ಹಾಗೂ ಅನುತ್ತೀರ್ಣಗೊಳಿಸದಿರುವ ನಿಯಮಗಳ ಬಗ್ಗೆ ಮಕ್ಕಳ, ಶಿಕ್ಷಕರ, ಪೋಷಕರ ಸಾಮಾನ್ಯ ಅಭಿಪ್ರಾಯವೇನು?
- 10ನೇ ತರಗತಿಯ ಬೋರ್ಡ್ ಪರೀಕ್ಷೆಯನ್ನು ನಿರ್ಮೂಲನೆ ಮಾಡಿರುವುದು ಮಕ್ಕಳ ಕಲಿಕಾ ಮಟ್ಟದಲ್ಲಿ ಕೊರತೆ ತಂದಿರುವುದೇ?
- ಮಕ್ಕಳ ಉತ್ತಮ ಮೌಲ್ಯಮಾಪನಕ್ಕಾಗಿ ಬೇರೆ ಯಾವ ಸುಧಾರಣೆಯನ್ನು ಶಿಫಾರಸ್ಸು ಮಾಡುವಿರಿ?
- ನಮ್ಮ ಪರೀಕ್ಷಾ ಪದ್ದತಿಯು ಕೇವಲ ಮಕ್ಕಳ ಪುಸ್ತಕ ಕಲಿಕೆಯನ್ನು ಮಾತ್ರ ಮೌಲ್ಯಮಾಪನ ಮಾಡುತ್ತಿದೆಯೇ?
- ಪರೀಕ್ಷಾ ಪದ್ದತಿಯಲ್ಲಿ ಬದಲಾವಣೆ ತಂದು, ಮಕ್ಕಳ ಕಲ್ಪನೆಯ ಅನ್ವಯಿಸುವಿಕೆ, ಸಮಸ್ಯೆಯನ್ನು ಪರಿಹಾರ ಮಾಡುವ ಶಕ್ತಿ ಮತ್ತು ಚಿಂತನೆಗಳ ನಿರ್ಣಯ ಮಾಡುವುದು ಇವುಗಳ ಬಗ್ಗೆ ಮೌಲ್ಯಮಾಪನ ಮಾಡಬಹುದೇ?
- ಮೌಲ್ಯಮಾಪನ ಪದ್ದತಿಯನ್ನು ಮತ್ತುಷ್ಟು ಸೂಕ್ಷ್ಮವನ್ನಾಗಿಸಿ, ಮಕ್ಕಳ ಯೋಚನೆ ಮತ್ತು ಆವಿಷ್ಕಾರಗಳ ಮೌಲ್ಯಮಾಪನ ಮಾಡಿ ಪ್ರಶಸ್ತಿ ನೀಡುವ ಬಗ್ಗೆ ಬದಲಾವಣೆ ತರಬಹುದೇ?

5. **ಉತ್ತಮ ಗುಣಮಟ್ಟದ ಶಿಕ್ಷಕರನ್ನು ಬೋಧನೆಗೆ ಸಿದ್ಧಪಡಿಸಲು ಶಿಕ್ಷಕರ ಶಿಕ್ಷಣದಲ್ಲಿ ನವೀಕರಣ ತರುವುದು.**

ದೇಶದಲ್ಲಿ ಶಿಕ್ಷಕರ ಗುಣಮಟ್ಟವು ಒಂದು ಪ್ರಮುಖ ಚಿಂತಾ ವಿಷಯವಾಗಿದ್ದು, ಶಿಕ್ಷಕರ ಗುಣಮಟ್ಟ ಹೆಚ್ಚಿಸುವುದು ಒಂದು ಪ್ರಮುಖ ಬೇಡಿಕೆಯಾಗಿದೆ. ಶಿಕ್ಷಕರ ಕೊರತೆ, ಪ್ರೌಢಶಾಲೆಯಲ್ಲಿ ಗಣಿತ, ವಿಜ್ಞಾನ ಮತ್ತು ಭಾಷಾ ಶಿಕ್ಷಕರ ಕೊರತೆ, ಸೇವಾ ಪೂರ್ವ ಹಾಗೂ ಸೇವಾ ನಿರತ ಶಿಕ್ಷಕರ ತರಬೇತಿಯ ಗುಣಮಟ್ಟ ಇವುಗಳ ಬಗ್ಗೆ ಸಾಕಷ್ಟು ಕ್ರಮಗಳನ್ನು ಪ್ರಾರಂಭಿಸಲಾಗಿದೆ. ಸೇವಾ ನಿರತ ಶಿಕ್ಷಕರ ವೃತ್ತಿಪರತೆಯಲ್ಲಿ ವೃದ್ಧಿ, ಶಿಕ್ಷಕರ ವೃತ್ತಿಪರತೆ, ಶಿಕ್ಷಕರಿಗೆ ಪ್ರೇರಣೆ ನೀಡುವುದು, ಕಲಿಕಾ ಪರಿಣಾಮದ ಬಗ್ಗೆ ಖಾತರಿ ಪಡಿಸಲು ಶಿಕ್ಷಕರ ಹೊಣೆಗಾರಿಕೆ, ಶಿಕ್ಷಕರ ತರಬೇತಿ ಕೇಂದ್ರಗಳ ಅಭಿವೃದ್ಧಿ ಮತ್ತು ಶಿಕ್ಷಕರ ಪ್ರಶಿಕ್ಷಕರಲ್ಲಿನ ಗುಣಮಟ್ಟ ಅಭಿವೃದ್ಧಿಗಾಗಿ ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗಿದೆ. ಗುಣಮಟ್ಟ ಅಭಿವೃದ್ಧಿಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳೂ ಇಷ್ಟೆಲ್ಲಾ ಕ್ರಮ ಕೈಗೊಂಡರೂ, ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹೆಚ್ಚಿನ ಸಂಖ್ಯೆಯು ಶಿಕ್ಷಕರ ಖಾಲಿ ಹುದ್ದೆಗಳು, ತರಬೇತಿ ರಹಿತ ಶಿಕ್ಷಕರ ಸಮಸ್ಯೆಗಳು, ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ವೃತ್ತಿಪರತೆಯ ಕೊರತೆ, ಹಾಗೂ ತರಗತಿ ಕೊಠಡಿಯಲ್ಲಿನ ವ್ಯವಹಾರದಲ್ಲಿ ಹೊಂದಾಣಿಕೆ ಇಲ್ಲದಿರುವುದು, ಶಿಕ್ಷಕರ ಗೈರುಹಾಜರಿ, ಬೋಧನೇತರ ಚಟುವಟಿಕೆಗಳಲ್ಲಿ ಶಿಕ್ಷಕರ ಭಾಗವಹಿಸುವಿಕೆ ಮುಂತಾದ ಅನೇಕ ಸಮಸ್ಯೆಗಳನ್ನು ಪರಿಹರಿಸುವ ಅಗತ್ಯವಿದೆ. ಗುಣಮಟ್ಟದ ನೇಮಕಾತಿಯನ್ನು ಗಮನದಲ್ಲಿಟ್ಟುಕೊಂಡು, ಶಿಕ್ಷಕರ ನೇಮಕಾತಿಯಲ್ಲಿ ಸಿ.ಬಿ.ಎಸ್.ಇ. ಸಂಸ್ಥೆಯು ಕೇಂದ್ರ ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು ಪರಿಚಯಿಸಿದೆ. ಅನೇಕ ರಾಜ್ಯ ಸರ್ಕಾರಗಳು ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು (TET) ಪ್ರಾರಂಭಿಸಿವೆ.

- ಪ್ರಾಥಮಿಕ ಶಾಲಾ ಹಂತದಲ್ಲಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕ್ರಮ ಕೈಗೊಳ್ಳಬೇಕು?
- ಬೋಧನಾ–ಕಲಿಕೆಯಲ್ಲಿ ಗುಣಮಟ್ಟಸಾಧನೆಯನ್ನು ಮಾಡಲು ಪ್ರಸ್ತುತದ ಶಿಕ್ಷಕರ ತರಬೇತಿಗಳು ಏಕೆ ವೈಫಲ್ಯವಾಗಿದೆ?
- ಶಿಕ್ಷಕರ ಶಿಕ್ಷಣದಲ್ಲಿರುವ ಸಮಸ್ಯೆಗಳನ್ನು ಪರಿಹರಿಸಲು ಯಾವ ಕಾರ್ಯಾತ್ಮಕ ಪರಿಹಾರಗಳನ್ನು ಕೈಗೊಳ್ಳಬೇಕು?

- ಶಿಕ್ಷಕರ ಹೊಣೆಗಾರಿಕೆಯ ಸಂಸ್ಕೃತಿಯನ್ನು ಬೆಳೆಸಲು ಶಿಕ್ಷಕರ ಕಾರ್ಯ ನಿರ್ವಹಣೆಯ ಮೌಲ್ಯಮಾಪನದ ಅಗತ್ಯವಿದೆಯೇ? ಶಿಕ್ಷಕರ ಭಡ್ತಿಯು ಅವರ ಕಾರ್ಯನಿರ್ವಹಣೆಯೊಂದಿಗೆ ಸಂಯೋಗವಾಗಿರಬೇಕೆ?
- ಶಿಕ್ಷಕರ ಹುದ್ದೆ ಭರ್ತಿ, ವರ್ಗಾವಣೆ ಮುಂತಾದ ವಿಷಯಗಳನ್ನು ಗಣಕೀಕರಗೊಳಿಸಿ, ವೈಚಾರಿಕರಣಗೊಳಿಸುವ ಅಗತ್ಯವಿದೆಯೇ?
- ಪ್ರತಿ ವರ್ಷವೂ ಪ್ರತಿ ಶಿಕ್ಷಕರು ಕಡ್ಡಾಯವಾಗಿ ತರಬೇತಿಗೆ ಹಾಜರಾಗಲು ಯಾವ ಪದ್ದತಿಗಳನ್ನು ರೂಪಿಸಬೇಕು.

6. **ವಯಸ್ಕರ ಶಿಕ್ಷಣ ಹಾಗೂ ರಾಷ್ಟ್ರೀಯ ಮುಕ್ತ ಶಾಲಾ ವ್ಯವಸ್ಥೆಗಳ ಮೂಲಕ ವಿಶೇಷವಾಗಿ ಹೆಣ್ಣು ಮಕ್ಕಳು, ಪ.ಜಾತಿ, ಪ.ಪಂಗಡ ಹಾಗೂ ಅಲ್ಪಸಂಖ್ಯಾತರ ಅಕ್ಷರತೆಯನ್ನು ಗ್ರಾಮಾಂತರ ಪ್ರದೇಶದಲ್ಲಿ ವೇಗಗೊಳಿಸುವುದು.**

ಸಾಕ್ಷರತೆಯು ಶಿಕ್ಷಣದ ಅಭಿವೃದ್ಧಿಯಲ್ಲಿ ಅವಿಭಾಜ್ಯ ಮತ್ತು ಅನಿವಾರ್ಯ ಅಂಗವಾಗಿದೆ. ಸಾಕ್ಷರತೆಯು, ಜನಸಂಖ್ಯೆಯಲ್ಲಿ ಇಳಿಕೆ, ಶಿಶು ಮರಣ ಮತ್ತು ಬಡತನ, ಲಿಂಗ ತಾರತಮ್ಯದ ಇಳಿಕೆಯಲ್ಲಿ ಹಾಗೂ ಲಿಂಗ ತಾರತಮ್ಯ, ಸಮಗ್ರ ಅಭಿವೃದ್ಧಿ ಹೆಚ್ಚಿಸುವಲ್ಲಿ ಸಮಗ್ರವಾದ ದಾರಿಯಾಗಿದೆ. ಇದು ಪ್ರಜಾಪ್ರಭುತ್ವದ ಮೌಲ್ಯಗಳ ಪಾಲನೆ ಮಾಡಲು ಹಾಗೂ ಜನರಿಗೆ ಶಾಂತಿಯನ್ನು ನೀಡುತ್ತದೆ. ಹಿಂದಿನಿಂದ ನಿರ್ಲಕ್ಷ್ಯಕ್ಕೊಳಗಾದ ಜನಸಂಖ್ಯೆಯನ್ನು ಪ್ರಗತಿಯೆಡೆಗೆ ತರುವಲ್ಲಿ ಸಾಕ್ಷರತೆಯು ಬಹಳ ಪ್ರಮುಖ ಅಂಶವಾಗಿದೆ. ಕಾಲ ಕಾಲಕ್ಕೆ ತಕ್ಕಂತೆ ಅನುಷ್ಠಾನಗೊಳಿಸಿದ ವಯಸ್ಕರ ಶಿಕ್ಷಣ ಮತ್ತು ಶಿಕ್ಷಣದ ಮುಂದುವರಿಕೆ ಕಾರ್ಯಕ್ರಮಗಳ ಮೂಲ ಉದ್ದೇಶವೇ ಸಾರ್ವಜನಿಕ ವಯಸ್ಕರ ಶಿಕ್ಷಣವನ್ನು ಸಾಧಿಸುವುದಾಗಿದೆ.

2011ರ ಜನಗಣತಿಯ ಪ್ರಕಾರ, ಸಾಕ್ಷರತೆಯು 9.2 ಪ್ರತಿಶತಕ್ಕೆ ಏರಿದ್ದು, ರಾಷ್ಟ್ರೀಯ ಸಾಕ್ಷರತೆಯು 74.00 ಪ್ರತಿಶಕ್ಕಿಂತ ಹೆಚ್ಚಿಗೆ ಏರಿಲ್ಲದಿರುವುದು ಕಂಡುಬಂದಿದೆ. (2001ರಲ್ಲಿನ 64.8%) 2011ರ ಜನಗಣಿಯಲ್ಲಿ ಪುರಷಕರ ಸಾಕ್ಷರತೆಗಿಂತ ಸ್ತ್ರೀಯರ ಸಾಕ್ಷರತೆಯು ಸಾಕಷ್ಟು ಹೆಚ್ಚಾಗಿರುವುದನ್ನು ದೃಢಪಡಿಸಿದೆ. ಪುರಷರ ಸಾಕ್ಷರತೆಯು 6.86 ಪ್ರತಿಶತ ಹೆಚ್ಚಾಗಿದ್ದು 2001ರಲ್ಲಿದ್ದ 75.26ಕ್ಕಿಂತ 2011ರಲ್ಲಿ 82.14 ಪ್ರತಿಶತ ಹೆಚ್ಚಾಗಿದೆ. ಅದೇ ರೀತಿ ಸ್ತ್ರೀಯರ ಸಾಕ್ಷರತೆಯು 11.79 ಪ್ರತಿಶತ ಹೆಚ್ಚಾಗಿದ್ದು, 2001ರಲ್ಲಿದ್ದ 53.67ಗಿಂತ 65.46 ಪ್ರತಿಶತ ಹೆಚ್ಚಾಗಿದೆ. 2001ರಲ್ಲಿ 21.6 ಪ್ರತಿಶತ ಲಿಂಗ ತಾರತಮ್ಯವು 2011 ರಲ್ಲಿ 16.7 ಪ್ರತಿಶತಕ್ಕೆ ಇಳಿದಿದೆ. ಆದರೂ ಲಿಂಗತಾರತಮ್ಯದ ಗುರಿ 10 ಪಾಯಿಂಟ್‌ಗಳಿಗೆ ಹೋಲಿಸಿದರೆ, ಅಂತರವು ಇನ್ನೂ ಹೆಚ್ಚಾಗಿದೆ. ಇಲ್ಲಿಯವರೆಗೆ ಯೋಜಿಸಿದ ಗುರಿಯನ್ನು ತಲುಪಲಾಗಿಲ್ಲ. ಪೂರ್ಣ ಸಾಕ್ಷರತೆಯ ದರವು ಇನ್ನೂ 5 ಪಾಯಿಂಟ್‌ಗಳಿಂದ ಕಡಿಮೆಯಿದೆ ಹಾಗೂ ಲಿಂಗ ತಾರತಮ್ಯವನ್ನು ಇನ್ನೂ 6.7 ಪಾಯಿಂಟ್‌ಗಳಿಗೆ ಇಳಿಸಬೇಕಾಗಿದೆ. ಸಾಮಾಜಿಕ ಮತ್ತು ಪ್ರಾದೇಶಿಕ ತಾರತಮ್ಯವು ಹಾಗೇ ಉಳಿದಿದೆ.

ಔಪಚಾರಿಕ ಶಿಕ್ಷಣದ ಮೂಲಕ ಸಾಧಿಸಲಾಗದ ಸಾಕ್ಷರತೆಯ ಮಟ್ಟವನ್ನು ಹೆಚ್ಚಿಸಲು ಮತ್ತು ಉಳಿಸಿಕೊಳ್ಳಲು ವಯಸ್ಕರ ಶಿಕ್ಷಣವು ಪೂರಕವಾಗಿದ್ದು, ಅಗತ್ಯವಾಗಿದೆ. ರಾಷ್ಟ್ರೀಯ ಸಾಕ್ಷರತಾ ಅಭಿಯಾನದ "ಸಾಕ್ಷರ ಭಾರತ" ಕಾರ್ಯಕ್ರಮವನ್ನು ಒಂದು ಹೊಸ ಕಾರ್ಯಕ್ರಮವಾಗಿ ರೂಪಿಸಲಾಗಿದೆ.. ಮುಂದುವರಿದಂತೆ ಈ ಯೋಜನೆಯು ವಯಸ್ಕರ ಶಿಕ್ಷಣವನ್ನು ಪ್ರೋತ್ಸಾಹಿಸುತ್ತದೆ ಮತ್ತು ವಯಸ್ಕರ ಶಿಕ್ಷಣವನ್ನು ಬಲಪಡಿಸುತ್ತದೆ. ಮುಖ್ಯವಾಗಿ ಔಪಚಾರಿಕ ಶಿಕ್ಷಣದಿಂದ ವಂಚಿತರಾದ ಸ್ತ್ರೀಯರಿಗೆ ಶೈಕ್ಷಣಿಕ ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ. ವಯಸ್ಸಿನ ಮಿತಿಯನ್ನು ಮೀರಿದವರಿಗೂ ಶಿಕ್ಷಣದ ಅವಕಾಶವನ್ನು ವಿಸ್ತರಿಸಿದೆ. ಸದರಿ ಶಿಕ್ಷಣದಲ್ಲಿ ಸಾಕ್ಷರತೆ, ಮೂಲ ಶಿಕ್ಷಣ (ಔಪಚಾರಿಕ ಶಿಕ್ಷಣಕ್ಕೆ ಸಮನಾದ), ವೃತ್ತಿ ಶಿಕ್ಷಣ (ಕೌಶಲ ಅಭಿವೃದ್ಧಿ), ದೈಹಿಕ ಮತ್ತು ಭಾವನಾತ್ಮಕ ಅಭಿವೃದ್ಧಿ, ಪ್ರಾಯೋಗಿಕ ಕಲೆ, ಅನ್ವಯಿಕ ವಿಜ್ಞಾನ, ಕ್ರೀಡೆ, ಮನೋರಂಜನೆ ಮುಂತಾದ ವಿಷಯಗಳನ್ನು ಅಭ್ಯಾಸ ಮಾಡಬಹುದು. ರಾಷ್ಟ್ರೀಯ ಮಟ್ಟದಲ್ಲಿ 2012ರ ವೇಳೆಗೆ 80% ಸಾಕ್ಷರತೆ ಸಾಧಿಸುವ ಗುರಿಯನ್ನು ಈ ಯೋಜನೆಯು ಹೊಂದಿರುತ್ತದೆ. ವಯಸ್ಕ ಸ್ತ್ರೀ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಿದೆ. ಪುರುಷ ಮತ್ತು ಮಹಿಳಾ ಸಾಕ್ಷರತೆಯ ಅಂತರವನ್ನು 10 ಪಾಯಿಂಟ್‌ಗಿಂತ ಕಡಿಮೆ ಮಾಡುವ ಉದ್ದೇಶವನ್ನು ಹೊಂದಿದೆ.

ಗಮನಿಸಬಹುದಾದಂತಹ ಇಷ್ಟೆಲ್ಲಾ ಸಾಧನೆಯನ್ನು ಮಾಡಿದ್ದರೂ, ಸಾಕ್ಷರತೆ ದರದಲ್ಲಿ ಅಸಮಾನತೆ, ಹೆಚ್ಚಿನ ಲಿಂಗ ತಾರತಮ್ಯ, ಸಾಮಾಜಿಕ ಮತ್ತು ಪ್ರಾದೇಶಿಕ ಅಸಮಾನತೆಗಳು ಇನ್ನೂ ಉಳಿದಿವೆ. ಸಾಕ್ಷರತೆಯ ಮಟ್ಟದಲ್ಲಿ ಏರಿಕೆ ಆಗಿರುವುದು ವಯಸ್ಕರ ಶಿಕ್ಷಣ ಹಾಗೂ ಪ್ರಾಥಮಿಕ ಶಿಕ್ಷಣದಲ್ಲಿ ಸಾಧನೆ ಮಾಡಿರುವುದರಿಂದ. ಆದರೂ ಸಾಮಾಜಿಕವಾಗಿ ಹಿಂದುಳಿದ ಗುಂಪುಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಾಸ ಮಾಡುವ ಜನರಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳು ಹಾಗೂ ರಾಷ್ಟ್ರೀಯ ಮುಕ್ತ ಶಾಲೆಗಳ ಮೂಲಕ ಸಾಕ್ಷರತೆಯ ಮಟ್ಟವನ್ನು ಹೆಚ್ಚಿಸಬೇಕಾಗಿದೆ.

- ಹಳ್ಳಿ, ಬ್ಲಾಕ್ ಮತ್ತು ಜಿಲ್ಲೆಗಳಲ್ಲಿ ಸಾಕ್ಷರತೆಯನ್ನು ಮಟ್ಟವನ್ನು ಹೆಚ್ಚಿಸಲು ಇರುವ ಅಡ್ಡಿಗಳೇನು?
- ನಗರ ಪ್ರದೇಶಗಳಲ್ಲಿನ ಕೊಳಚೆ ಪ್ರದೇಶಗಳಲ್ಲಿ ವಯಸ್ಕರ ಶಿಕ್ಷಣವನ್ನು ಅನುಷ್ಠಾನಗೊಳಿಸುವುದು ಬಹಳ ಕಷ್ಟವೇ?

- ಸಾಕ್ಷರತೆ ಕಾರ್ಯಕ್ರಮಗಳು ಸಾಮಾಜಿಕವಾಗಿ ಹಿಂದುಳಿದ ಗುಂಪುಗಳನ್ನು ತಲುಪಲು ಅಂದುಕೊಂಡಷ್ಟು ಸಾಧನೆ ಮಾಡಲಾಗಿದಿರಲು ಕಾರಣಗಳೇನು?
- ಸಾಕ್ಷರತೆ ಮಟ್ಟದಲ್ಲಿರುವ ಅಸಮಾನತೆಗಳನ್ನು ಕಡಿಮೆ ಮಾಡಲು ಇನ್ನೂ ಯಾವ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸಬಹುದು?
- ರಾಷ್ಟ್ರೀಯ ಮುಕ್ತ ಶಿಕ್ಷಣವು ಹೆಚ್ಚಿನ ಸಂಖ್ಯೆಯಲ್ಲಿ, ಹೆಚ್ಚಿನ ವೇಗದಲ್ಲಿ ವಯಸ್ಕರ ಶಿಕ್ಷಣವನ್ನು ತಲುಪಬೇಕಾಗಿದೆಯೇ?
- ಸಾಕ್ಷರತಾ ಕಾರ್ಯಕ್ರಮಗಳನ್ನು ಹೆಚ್ಚು ಪ್ರಚುರಗೊಳಿಸಲು, ಅರಿವು ಮೂಡಿಸಲು ಔಪಚಾರಿಕ ಶಾಲಾ ಶಿಕ್ಷಣ ಪಡೆಯುತ್ತಿರವ ಮಕ್ಕಳ ಸಹಕಾರವನ್ನು ಪಡೆಯಬಹುದೇ?
- ನಿರ್ಧರಿತ ಕೌಶಲ್ಯಗಳು ಮತ್ತು ರಾಷ್ಟ್ರೀಯ ಜೀವನಧಾರ ಕಾರ್ಯಕ್ರಮಗಳನ್ನು ವಯಸ್ಕರ ಶಿಕ್ಷಣದಲ್ಲಿ ಹೇಗೆ ಸಮನ್ವಯಗೊಳಿಸಬಹುದು?
- ಹಳ್ಳಿ, ಬ್ಲಾಕ್ ಮತ್ತು ಜಿಲ್ಲೆಗಳಲ್ಲಿ ಸಾಕ್ಷರತೆಯನ್ನು ಮಟ್ಟವನ್ನು ಹೆಚ್ಚಿಸಲು ಇರುವ ಅಡ್ಡಿಗಳೇನು?

**7. ಶಾಲೆಗಳಲ್ಲಿ ಮತ್ತು ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ವ್ಯವಸ್ಥೆಯಾಧಾರಿತ ಶಿಕ್ಷಣವನ್ನು ವೃದ್ಧಿಗೊಳಿಸುವುದು.**

ಶಿಕ್ಷಣದ ಗುಣಮಟ್ಟದಲ್ಲಿ ಗಮನಾರ್ಹವಾದ ಸುಧಾರಣೆಯನ್ನು ಉಂಟು ಮಾಡುವಲ್ಲಿ ಮಾಹಿತಿ ಮತ್ತು ತಂತ್ರಜ್ಞಾನವು ಸಮರ್ಥ ಸಾಧನವಾಗಿದೆ. ಹೆಚ್ಚಿನ ಪ್ರೌಢಶಾಲೆಗಳಲ್ಲಿ ಕಡಿಮೆ ಮಟ್ಟದ ಕಂಪ್ಯೂಟರ್ ಸೌಲಭ್ಯಗಳಿವೆ. ಇದು ಮಕ್ಕಳು ಅಗತ್ಯವಿರುವ ತಂತ್ರಜ್ಞಾನ ಕೌಶಲವನ್ನು ಪಡೆಯಲು ಹಾಗೂ ಶಿಕ್ಷಕರಿಗೆ ಅವರ ಜ್ಞಾನವನ್ನು ಹೆಚ್ಚಿಸಿಕೊಳ್ಳುವಲ್ಲಿ ಸಹ ಮಿತಿಯಾಗಿದೆ. ಮಕ್ಕಳಿಗೆ ಅಗತ್ಯವಿರುವ ಕಲಿಕಾ ವಿಷಯಗಳನ್ನೂ ಅಳೆಯಲು ಸಹ ಶಿಕ್ಷಕರಿಗೆ ಅಡ್ಡಿಯಾಗಿದೆ.

ಶಾಲಾ ಶಿಕ್ಷಣದಲ್ಲಿ ಮಾಹಿತಿ ಮತ್ತು ತಂತ್ರಜ್ಞಾನದ ರಾಷ್ಟ್ರೀಯ ನೀತಿಯು ಅಭಿವೃದ್ಧಿಯ ಸಮಗ್ರ ಚೌಕಟ್ಟನ್ನು ರೂಪಿಸಿರುವುದಲ್ಲದೇ, ಮಾಹಿತಿ ತಂತ್ರಜ್ಞಾನ ಆಧಾರಿತ ಶಾಲಾ ವ್ಯವಸ್ಥೆಗೆ ಸಹಕಾರಿಯಾಗಿದೆ. ಶಾಲಾ ಶಿಕ್ಷಣ ವ್ಯಾಪ್ತಿಯಲ್ಲಿ ಅಭಿಯಾನ ರೂಪದ ಯೋಜನೆಗಳು ಸಮಗ್ರ ತಂತ್ರಜ್ಞಾನ ವೃದ್ಧಿಯನ್ನು ಮಾಡಲು ಸಾಧ್ಯವಿದೆ. ಇದು ಶಾಲಾ ಮುಖ್ಯಸ್ಥರು, ಶಿಕ್ಷಕರು, ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳಲ್ಲಿ ಮಾಹಿತಿ ತಂತ್ರಜ್ಞಾನದ ಕೌಶಲವನ್ನು ತಿಳಿದುಕೊಳ್ಳಲು ಸಹಕಾರಿಯಾಗಿದೆ. ಇದಲ್ಲದೇ ಇಂಗ್ಲೀಷ್, ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ವಿಜ್ಞಾನ, ಗಣಿತ ಸಮಾಜ ಶಾಸ್ತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಗುಣಮಟ್ಟದ ಮಾಹಿತಿಗಳನ್ನು ಗಣಕೀಕರಣ ಜ್ಞಾನ ಭಂಡಾರವಾಗಿದೆ. ತರಬೇತಿಗಾಗಿ ಮತ್ತು ಶಿಕ್ಷಕರು ಇ–ವಿಷಯಗಳನ್ನು ಸೃಷ್ಟಿಸುವಲ್ಲಿ ಮತ್ತು ಬಳಸುವಲ್ಲಿ ಪ್ರೋತ್ಸಾಹಿಸುವುದು, ಶಾಲಾ ಕೊಠಡಿಗಳಲ್ಲಿ ತಂತ್ರಜ್ಞಾನವನ್ನು ಬಳಸಲು ಅವಕಾಶ ಮಾಡುವುದು ಅಥವಾ ರಿಚಾರ್ಜಬಲ್ ಬ್ಯಾಟರಿಗಳನ್ನೊಳಗೊಂಡ ಪ್ರೊಜೆಕ್ಟರ್ ಬಳಸಿ ಸೌಲಭ್ಯ ಉಪಯೋಗಿಸುವುದು, ಮತ್ತು ಮಾಹಿತಿ ತಂತ್ರಜ್ಞಾನವನ್ನೊಳಗೊಂಡ ಶಿಕ್ಷಣವನ್ನು ಅನುಷ್ಠಾನಗೊಳಿಸುವುದು. ಮಾಹಿತಿ ತಂತ್ರಜ್ಞಾನವನ್ನೊಳಗೊಂಡ ಪರೀಕ್ಷೆಗಳನ್ನು ನಡೆಸುವುದು ಮತ್ತು ಸಂಸ್ಥೆಗಳಲ್ಲಿ ಇ–ಆಡಳಿತ ಪದ್ದತಿಯನ್ನು ಜಾರಿಗೊಳಿಸುವುದು ಮತ್ತು ವೆಬ್ ಆಧಾರಿತ ಶಿಕ್ಷಣದ ಮೂಲಕ ವ್ಯವಸ್ಥಿತವಾದ ಮಟ್ಟದಲ್ಲಿ ಶಿಕ್ಷಣ ನೀಡುವುದು. ಮಾಹಿತಿ ತಂತ್ರಜ್ಞಾನವನ್ನು ಶಾಲೆಗಳಲ್ಲಿ ಸಾಕಷ್ಟು ವಿಧಾನಗಳಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಎಲ್ಲಾ ಚಟುವಟಿಕೆಗಳಲ್ಲಿ ಗುಣಮಟ್ಟ ಮತ್ತು ದಕ್ಷತೆಯನ್ನು ಸಾಧಿಸಲು ಅತ್ಯುತ್ತಮವಾಗಿ ಮಾಹಿತಿ ಮತ್ತು ತಂತ್ರಜ್ಞಾನವನ್ನು ಬಳಸ ಬೇಕಾಗಿದೆ.

- ಮಾಹಿತಿ ತಂತ್ರಜ್ಞಾನವನ್ನು ಶಿಕ್ಷಣ ಬೋಧನೆಯಲ್ಲಿ ಅಳವಡಿಸುವಾಗ ಎದುರಿಸುವ ಸಾಮಾನ್ಯ ಸಮಸ್ಯೆಗಳೇನು?
- ಸಾಮಾನ್ಯ ಸಮಸ್ಯೆಗಳನ್ನು ಪರಿಹರಿಸಲು ಕಾರ್ಯಸಾಧ್ಯವಾದ ಪರಿಹಾರಗಳನ್ನು ಕಂಡುಕೊಳ್ಳಲಾಗಿದೆಯೇ?
- ಈ ಬಗ್ಗೆ ಇತರೆ ರಾಜ್ಯಗಳ ವಿವಿಧ ಅನುಭವಗಳೇನು?
- ಶಾಲೆ ಮತ್ತು ವಯಸ್ಕರ ಶಿಕ್ಷಣದಲ್ಲಿ ಮಾಹಿತಿ ಮತ್ತು ತಂತ್ರಜ್ಞಾನವನ್ನು ಅಳವಡಿಸಿ, ನಿಯಂತ್ರಿಸುವ ದಾರಿಗಳೇನು? ಯಾವುದಾದರೂ ಒಳ್ಳೆಯ ತರಗತಿ ಅಭ್ಯಾಸಗಳ ಅನುಭವವಾಗಿದ್ದಲ್ಲಿ ವಿಷಯವನ್ನು ಹಂಚಿಕೊಳ್ಳುವುದು.
- ಭೌತಿಕ ಸೌಲಭ್ಯಗಳು, ಅದರಲ್ಲೂ ವಿದ್ಯುತ್ ಶಕ್ತಿಯ ಕೊರತೆಯನ್ನು ಎದುರಿಸುತ್ತಿರುವ ರಾಜ್ಯಗಳ ಶಾಲೆಗಳಲ್ಲಿ ಮಾಹಿತಿ ತಂತ್ರಜ್ಞಾನದ ವಿಷಯಗಳನ್ನು ಬಳಸುತ್ತಿರುವ ಬಗ್ಗೆ ಪ್ರಾಮಾಣಿಕವಾಗಿ ಖಚಿತಪಡಿಸಕೊಳ್ಳುವ ಬಗೆ ಹೇಗೆ?

**8. ಶಾಲಾ ಶಿಕ್ಷಣದಲ್ಲಿ ವಿಜ್ಞಾನ ಹಾಗೂ ಗಣಿತ ಬೋಧನೆಯಲ್ಲಿ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಉತ್ತಮ ಪಡಿಸಲು ಹೊಸ ಜ್ಞಾನ, ಶಿಕ್ಷಣ ಶಾಸ್ತ್ರ ಹೊಸ ವಿಧಾನಗಳನ್ನು ಅಳವಡಿಸುವುದು.**

ಪ್ರೌಢಶಾಲೆಗಳಲ್ಲಿ ಗುಣಮಟ್ಟವನ್ನು ಅಭಿವೃದ್ಧಿಪಡಿಸಲು, ತರಗತಿ ಕೊಠಡಿಯ ಪ್ರಕ್ರಿಯೆ ಉತ್ತಮವಾಗಿಉಸಿ, ಉತಮ ಪರಿಸರದೊಂದಿಗೆ ನಡೆಸಲು ಹೆಚ್ಚುವರಿ ಶಿಕ್ಷಕರ ನೇಮಕಾತಿ ಮಾಡಿ ಶಿಕ್ಷಕರ ಮಕ್ಕಳ ಅನುಪಾತವನ್ನು ವೃದ್ಧಿ ಮಾಡಲು ತೆಗೆದುಕೊಂಡಿರುವ ಕ್ರಮಗಳು ಉತ್ತಮವಾಗಿದೆ. ಮುಂದುವರೆದಂತೆ ವಿಜ್ಞಾನ, ಗಣಿತ ಮತ್ತುಇಂಗ್ಲೀಷ್ ವಿಷಯಗಳ ಬೋಧನೆಗೆ ವಿಶೇಷ ಒತ್ತು ಕೊಡಲಾಗಿದೆ. 10ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ 80 ಪ್ರತಿಶತ ಮಕ್ಕಳು ವಿಜ್ಞಾನ, ಗಣಿತ ಮತ್ತು ಇಂಗ್ಲೀಷ್ ವಿಷಯಗಳಲ್ಲಿ ಕಳಪೆ ಗುಣಮಟ್ಟದ ಕಾರಣ ಅನುತ್ತೀರ್ಣರಾಗುತ್ತಾರೆ. ದೇಶದಲ್ಲಿ ವೈಜ್ಞಾನಿಕ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವಲ್ಲಿ, ಪ್ರೌಢಶಾಲಾ ಹಂತದಲ್ಲಿ ವಿಜ್ಞಾನ ವಿಷಯಗಳ ಅಧ್ಯಯನವನ್ನು ಮಾಡುವ ಮಕ್ಕಳ ದಾಖಲಾತಿ ಸಂಖ್ಯೆಯಲ್ಲಿ ಕೊರತೆಯಾಗಿರುವುದು ಹಾಗೂ ಕಳಪೆ ಶಿಕ್ಷಣದ ಮಟ್ಟ ಒಂದು ದೊಡ್ಡ ಅಡ್ಡಿಯಾಗಿದೆ. ವಿಜ್ಞಾನ ಮತ್ತು ಗಣಿತ ವಿಷಯಗಳಿಗೆ ಅತ್ಯಂತ ವಿಶೇಷ ಗಮನದ ಅಗತ್ಯವಿದೆ. ಕೆಳಗಿನ ಕೆಲವು ಯತ್ನಗಳನ್ನು ಪರಿಶೀಲಿಸಬಹುದಾಗಿದೆ;

- ನಾವಿನ್ಯಯುತ ಶಿಷ್ಯ ವೇತನವನ್ನು ನೀಡುವ ಮೂಲಕ ಶಾಲೆಗಳಲ್ಲಿ ವೈಜ್ಞಾನಿಕ ಕ್ಷೇತ್ರದಲ್ಲಿ ನಾವಿನತ್ಯತೆಯ ಪ್ರತಿಭೆಗಳನ್ನು ಗುರ್ತಿಸಿ, ಸಂಶೋಧನೆಗೆ ಅನುವು ಮಾಡಿಕೊಡುವುದು.
- ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ತಲುಪುವಂತೆ ವಿಜ್ಞಾನದ ಕುರಿತು ಬೃಹತ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು – ಸಂಚಾರಿ ಪ್ರಯೋಗಾಲಯ ಮತ್ತು ಕೇಂದ್ರಗಳ ಸ್ಥಾಪನೆ

ಗುಣಮಟ್ಟ ಶಿಕ್ಷಣವು, ಪಠ್ಯಕ್ರಮ, ಕಲಿಕೆಯ ಅಂಶಗಳು, ಕಲಿಕೆಯ ಸಾಧನೆಗಳು, ಶಿಕ್ಷಣ ಪ್ರಕ್ರಿಯೆಗಳು, ತರಗತಿಯ ಮೌಲ್ಯಮಾಪನ ಚೌಕಟ್ಟು, ಶಿಕ್ಷಕರ ಸಹಕಾರ, ಶಾಲೆಯ ನಾಯಕತ್ವ ಮತ್ತು ಶಾಲಾ ಆಡಳಿತ ಇವುಗಳನ್ನು ಅಂತರ್ಗತವಾಗಿ ಒಳಗೊಂಡಿರುತ್ತದೆ. ಸಮಾಜದಲ್ಲಿ ಅಭಿವೃದ್ಧಿಯ ಬದಲಾವಣೆ ಅರಿವಿಗೆ ತಕ್ಕಂತೆ ಸಮಯಾನುಸಾರವಾಗಿ ಪಠ್ಯಕ್ರಮದ ಚೌಕಟ್ಟನ್ನು

ಬದಲಾಯಿಸುವ ಅವಶ್ಯಕತೆ ಇರುತ್ತದೆ. ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಅನೇಕ ವಿಧಧ ಕಲಿಕಾ ಮಜಲುಗಳನ್ನು ಅಭಿವೃದ್ಧಿ ಪಡಿಸಬೇಕು, ಇದು ಶಾಲೆ, ಕ್ಲಸ್ಟರ್ ಮಟ್ಟಗಳಲ್ಲಿ ಶಿಕ್ಷಕರಿಗೂ ಸಹ ಬದಲಾವಣೆಗೆ ಅವಕಾಶವಿರಬೇಕು. ಇದರ ಮೂಲಕ ಶಿಕ್ಷಕರಿಗೆ ಅನುಕೂಲವಾಗಿರುತ್ತದೆ. ಸರ್ವ ಶಿಕ್ಷಣ ಅಭಿಯಾನದಡಿ ಅನುಷ್ಠಾನಗೊಳಿಸಿರುವ ಕಲಿಕಾ ಅಭಿವೃದ್ಧಿ ಚಟುವಟಿಕೆಗಳನ್ನು 12ನೇ ಆರ್ಥಿಕ ಯೋಜನೆಯಲ್ಲಿಯೂ ಮುಂದುವರಿಸಲಾಗಿದೆ. ರಾಜ್ಯವು ಪ್ರತಿ ವರ್ಷವೂ ಸಾಧಿಸಬೇಕಾದ ಕಲಿಕಾ ಗುರಿಗಳನ್ನು ಅಭಿವ್ಯಕ್ತ ಪಡಿಸಬೇಕು ಮತ್ತು ಈ ಗುರಿಗಳನ್ನು ಸಾಧಿಸಲು ಅನೇಕ ಕಾರ್ಯತಂತ್ರಗಳನ್ನು ರೂಪಿಸಬೇಕು. (ವಿಧಾನ, ಸಾಧನಗಳು, ಮಾಡೆಲ್‌ಗಳು, ಮಾಪನಗಳು). ಸಂಸ್ಥಾ ಮೌಲ್ಯಮಾಪನ / ಪ್ರಾಥಮಿಕ ಶಾಲೆಗಳ ಮಾನ್ಯತೆ ಇವುಗಳನ್ನು ರೂಪಿಸಬೇಕು.

- ಬೋಧನಾ–ಕಲಿಕಾ ಪ್ರಕ್ರಿಯೆಯಲ್ಲಿ ಉತ್ತಮ ಗುಣಮಟ್ಟದ ಪರಿಣಾಮವನ್ನು ಪಡೆಯಲು ಯಾವ ಕಾರ್ಯ ತಂತ್ರಗಳನ್ನು ರೂಪಿಸಬೇಕು?
- ಕಲಿಕಾ ಮಟ್ಟವನ್ನು ಉತ್ತಮಪಡಿಸಲು ಪಠ್ಯಕ್ರಮ ಮುಂದುವರಿಕೆ, ಹೊಸ ಶಿಕ್ಷಣ ಶಾಸ್ತ, ತಂತ್ರಜ್ಞಾನ ಬಳಕೆಗಳ ಬಗ್ಗೆ ಯಾವ ರೀತಿಯ ವಿವಿಧ ಮಾರ್ಗಗಳು ಬೇಕು?
- ಪೋಷಕರಿಗೆ ತಮ್ಮ ಮಗು ಯಾವ ಮಟ್ಟದಲ್ಲಿ ಯಾವ ಕಲಿಕಾ ಮಟ್ಟವನ್ನು ತಲುಪಬೇಕೆಂಬ ಅರಿವಿಲ್ಲದಿದ್ದಲ್ಲಿ, ಪೋಷಕರ ಸಹಕಾರದ ಹೊರತಾಗಿಯೂ ಈ ಪ್ರಕ್ರಿಯೆಗಳು ನಿಜವಾಗಿಯೂ ಪರಿಣಾಮಕಾರಿಯಾಗುವುದೇ? ಈ ವಿಷಯವನ್ನು ಯಾವ ರೀತಿ ಸರಿಪಡಿಸುವುದು?

## 9. ಶಾಲೆಯ ಗುಣಮಟ್ಟ, ಶಾಲೆಯ ಮೌಲ್ಯಮಾಪನ ಮತ್ತು ಶಾಲೆಯ ನಿರ್ವಹಣಾ ವ್ಯವಸ್ಥೆ.

ಶಾಲೆಯ ಕಾರ್ಯನಿರ್ವಹಿಸುವ ಅಂಶಗಳನ್ನೊಳಗೊಂಡಂತೆ ಶಾಲಾ ಗುಣಮಟ್ಟ ಮೌಲ್ಯಮಾಪನ ಮತ್ತು ಮಾನ್ಯತೆ ವ್ಯವಸ್ಥೆಯನ್ನು ಸಿದ್ಧಪಡಿಸುವುದು ಅತ್ಯಂತ ಅಗತ್ಯವಾಗಿದೆ. ಇದು ಪಠ್ಯಾಧಾರಿತ ಮತ್ತು ಪಠ್ಯೇತರ ವಿಷಯಗಳು, ಭೌತಿಕ ಸೌಲಭ್ಯಗಳು, ಸಿಬ್ಬಂದಿಗಳ ನಿರ್ವಹಣೆ, ಶಾಲಾ ನಾಯಕತ್ವ, ಕಲಿಕಾ ಫಲಿತಾಂಶ ಮತ್ತು ಮಕ್ಕಳ, ಅವರ ತಂದೆ ತಾಯಿ / ಪೋಷಕರ ತೃಪ್ತಿ ಇವುಗಳನ್ನೊಳಗೊಂಡಂತೆ ಇರಬೇಕು.

ಕಡ್ಡಾಯ ಮತ್ತು ಮನವೊಲಿಸುವಿಕೆ ಮೂಲಕ ಶಾಲೆಯನ್ನು ಸಮತೋಲನದಲ್ಲಿ ನಡೆಸುವ ಉತ್ತಮ ಆಡಳಿತ ವ್ಯವಸ್ಥೆಯ ಪ್ರಯತ್ನವಾಗುತ್ತಿದೆ. ಜಿಲ್ಲಾ ಮತ್ತು ಬ್ಲಾಕ್ ಮಟ್ಟದ ಶಿಕ್ಷಣ ಅಧಿಕಾರಿಗಳ ತರಬೇತಿ, ಉತ್ತಮ ಆಡಳಿತಾತ್ಮಕ ಅಭ್ಯಾಸಗಳುಳ್ಳ ಮುಖ್ಯ ಶಿಕ್ಷಕರ ತರಬೇತಿ, ಉತ್ತಮ ಉಸ್ತುವಾರಿಗಾಗಿ ಹಾಗೂ ಶಾಲೆಯ ಅಭಿವೃದ್ಧಿಯಲ್ಲಿ ದತ್ತಾಂಶಗಳ ಬಳಕೆ, ಶ ಸಮುದಾಯ ಸಂಪನ್ಮೂಲಗಳ ಕ್ರೋಢೀಕರಣ, ಶಾಲೆಯ ಅಭಿವೃದ್ಧಿಯನ್ನು ಉತ್ತಮಗೊಳಿಸುವ ಪ್ರಯತ್ನ ಇವುಗಳನ್ನೂ ಒಳಗೊಂಡಿರಬೇಕು. ಶಾಲಾ ಆಡಳಿತದಲ್ಲಿ ಸ್ಥಳೀಯ ಸಮುದಾಯ ಮತ್ತು ಪಂಚಾಯತ್‌ಗಳು ಹೆಚ್ಚು ಸಕ್ರಿಯವಾಗಿ ಭಾಗವಹಿಸುತ್ತಿಲ್ಲ. ಕೆಲವು ಹಳ್ಳಿಗಳಲ್ಲಿ ಗ್ರಾಮ ಶಿಕ್ಷಣ ಸಮಿತಿ / ಶಾಲಾ ಅಭಿವೃದ್ಧಿ ಸಮಿತಿಗಳು ರಚನೆಯಾಗಿದ್ದರೂ, ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಸ್ಥಳೀಯ ಸಮುದಾಯವು ಸಕ್ರಿಯವಾಗಿ ಭಾಗವಹಿಸುವುದರ ಮೂಲಕ ಮಾತ್ರ ಹಳ್ಳಿಯಲ್ಲಿನ ಶಾಲೆಯು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತದೆ ಎಂಬುದು ಸಾಮಾನ್ಯ ನಂಬಿಕೆಯಾಗಿದೆ.

- ಶಾಲಾ ಆಡಳಿತದಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಉತ್ತಮ ಪಡಿಸಲು ಯಾವ ಕಾರ್ಯತಂತ್ರ ಅಳವಡಿಸಬೇಕು?
- ಶಾಲೆಯ ಆಡಳಿತದಲ್ಲಿ ಪಂಚಾಯಿತಿಯ ಪಾತ್ರವೇನು?
- ಶಾಲೆಗಳಲ್ಲಿ ಮೌಲ್ಯಮಾಪನ ಮತ್ತು ಮಾನ್ಯತೆಯನ್ನು ಹೇಗೆ ಅನುಷ್ಠಾನಗೊಳಿಸಬೇಕು?
- ಶಾಲೆಯ ಗ್ರೇಡನ್ನು ಗುರ್ತಿಸುವಲ್ಲಿ ಯಾವ ಕಾರ್ಯನಿರ್ವಹಣಾ ಸೂಚಕಗಳನ್ನು (performance indicator) ಬಳಸಬೇಕು?
- ಇದರಲ್ಲಿ ಪ್ರಸ್ತುತ ಅನುಭವಗಳೇನು? ಸ್ಪಷ್ಟವಾದ ಪರಿಣಾಮದ ಗುರಿ ಮಟ್ಟಲು ಇದನ್ನು ಹೇಗೆ ಉತ್ತಮಗೊಳಿಸಬಹುದು?
- ಶಾಲಾ ಅಭಿವೃದ್ಧಿಯಲ್ಲಿ ಉಸ್ತುವಾರಿ ಆಗಲು ಮತ್ತು ಶಾಲೆಯ ಅಭಿವೃದ್ಧಿ ಮಾಡಲು ಬ್ಲಾಕ್, ಜಿಲ್ಲಾ ಮಟ್ಟದಲ್ಲಿ ಶಿಕ್ಷಣ ಅಧಿಕಾರಿಗಳ ತರಬೇತಿಯ ನವೀಕರಣವಾಗಿದೆಯೆ?

**10. ಅಂತರ್ವೇಶನ ಶಿಕ್ಷಣವನ್ನು ಅನುವು ಮಾಡಿಕೊಡುವುದು – ಪ.ಜಾತಿ, ಪ.ಪಂಗಡ, ಹೆಣ್ಣು ಮಕ್ಕಳು, ಅಲ್ಪಸಂಖ್ಯಾತರು ಹಾಗೂ ವಿಶೇಷ ಅಗತ್ಯವುಳ್ಳ ಮಕ್ಕಳನ್ನೊಳಗೊಂಡ ಶಿಕ್ಷಣ.**

ಸಾಮಾಜಿಕ ಲಭ್ಯತೆ ಹಾಗೂ ಸಮಾನತೆಯ ಸಮಸ್ಯೆಗಳು ತೀರಾ ಸಂಕೀರ್ಣವಾದ ವಿಷಯಗಳಾಗಿವೆ. ಸೌಲಭ್ಯವಂಚಿತ ಗುಂಪುಗಳಾದ ಪ.ಜಾತಿ, ಪ.ಪಂಗಡ, ಮುಸ್ಲಿಂ, ಹೆಣ್ಣು ಮಕ್ಕಳು, ವಿಶೇಷ ಅಗತ್ಯವುಳ್ಳ ಮಕ್ಕಳ ಹಾಗೂ ಸಾಮಾನ್ಯ ಜನಸಂಖ್ಯೆಯ ಸರಾಸರಿ ದಾಖಲಾತಿಯಲ್ಲಿ ವ್ಯತ್ಯಸದಲ್ಲಿ ಇಳಿಕೆಯಾಗಿದ್ದು, ಕಲಿಕಾ ಫಲಿತಾಂಶದಲ್ಲಿ ಈ ಗುಂಪುಗಳ ನಡುವೆ ಇನ್ನೂ ಗಣನೀಯ ವ್ಯತ್ಯಾಸ ಇರುವುದಲ್ಲದೇ, ಸೌಲಭ್ಯವಂಚಿತ ಗುಂಪುಗಳು, ಆರ್ಥಿಕವಾಗಿ ಹಿಂದುಳಿದ ಗುಂಪುಗಳಲ್ಲಿ ಕಲಿಕೆಯ ಫಲಿತಾಂಶದಲ್ಲಿ ಅತ್ಯಂತ ಕಡಿಮೆ ಮಟ್ಟದ ಏರಿಕೆ ಕಂಡು ಬಂದಿರುತ್ತದೆ. ಅತಿ ಹೆಚ್ಚಿನ ಮಟ್ಟದ ಈ ವ್ಯತ್ಯಾಸವು ಸಮಾನ ದಾಖಲಾತಿಯ ವಿಫಲತೆಯಲ್ಲಿ ಎಚ್ಚರಿಕೆಯ ಗಂಟೆಯಾಗಿದೆ, ಏಕೆಂದರೆ ಕೆಳಮಟ್ಟದ ಕಲಿಕೆಯಲ್ಲಿರುವ ಮಕ್ಕಳು ಹೆಚ್ಚಾಗಿ ಶಾಲೆ ತೊರೆಯುವ ಸಂಭವವಿರುತ್ತದೆ. ಹೆಣ್ಣು ಮಕ್ಕಳ ಮತ್ತು ಇತರೆ ವಿಶೇಷ ಗುಂಪುಗಳ ಮಕ್ಕಳ ಭಾಗವಹಿಸುವಿಕೆಯನ್ನು ಹೆಚ್ಚಿಸಲು ವಿಶೇಷ ನಿರ್ಧಿಷ್ಟ ಕಾರ್ಯತಂತ್ರಗಳನ್ನು ಮಾಡಲಾಗಿದೆ. ಲಿಂಗ ತಾರತಮ್ಯ ಮತ್ತು ಸಾಮಾಜಿಕ ಅಸಮಾನತೆಗಳನ್ನು ಕಡಿಮೆ ಮಾಡಲು ಪ್ರಸ್ತುತದಲ್ಲಿರುವ ಕಾರ್ಯತಂತ್ರಗಳನ್ನು ಪರಿಶೀಲಿಸಿ, ಪರಿಣಾಮಕಾರಿ ಸಮನ್ವಯತೆ ಸಾಧಿಸಲು ಗಮನ ಸೆಳೆಯುವ ಕಾರ್ಯ ತಂತ್ರಗಳನ್ನು ಗುರ್ತಿಸಬೇಕಿದೆ.

ಕಡ್ಡಾಯ ಶಿಕ್ಷಣ ಕಾಯಿದೆಯನ್ನು ಅಳವಡಿಸಿಕೊಂಡು ವ್ಯವಸ್ಥೆಯ ಅಗಾಧವಾದ ವಿಸ್ತರಣೆಯನ್ನು ಮಾಡುವುದರ ಮೂಲಕ, ಶಾಲಾ ಶಿಕ್ಷಣದ ಲಭ್ಯತೆಯನ್ನು ಸಾರ್ವತ್ರೀಕರಣಗೊಳಿಸಲಾಗಿದೆ. ಆದರೂ, ಅನೇಕ ವಿಶೇಷ ವಿಧಾನಗಳ ಅಳವಡಿಕೆಯ ನಂತರವೂ ಜನಸಂಖ್ಯೆಯ ಕೆಲವು ವಿಭಾಗಗಳು ಸಂಪೂರ್ಣವಾಗಿ ಶಿಕ್ಷಣದ ಸೌಲಭ್ಯವನ್ನು ಪಡೆಯುತ್ತಿಲ್ಲ.

ಅನೇಕ ಹೆಣ್ಣು ಮಕ್ಕಳನ್ನು ಇಂದಿಗೂ ಶಾಲೆಗೆ ಸೇರಿಸುವುದಿಲ್ಲ. ಶಾಲೆಗೆ ಸೇರಿರುವ ಮಕ್ಕಳೂ ಕೂಡ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದರೂ, ಪ್ರೌಢ ಹಾಗೂ ಉನ್ನತ ಶಿಕ್ಷಣದವರೆಗೆ ಹೋಗುವುದಿಲ್ಲ.

- ವಿಶೇಷವಾಗಿ ಪ.ಜಾತಿ, ಪ.ಪಂಗಡ ಹಾಗೂ ಅಲ್ಪಸಂಖ್ಯಾತ ಗುಂಪುಗಳ ಮಕ್ಕಳು ಹಾಗೂ ಇತರೆ ಸೌಲಭ್ಯವಂಚಿತ ಮಕ್ಕಳು ಪೂರ್ಣವಾಗಿ ಶಾಲಾ ವ್ಯವಸ್ಥೆಯಲ್ಲಿ ತೊಡಗಿಸಿಕೊಳ್ಳುವುದನ್ನು ಹೇಗೆ ಖಚಿತ ಪಡಿಸಿಕೊಳ್ಳಬಹುದು?
- ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಅವರ ವಿಶೇಷ ಅಗತ್ಯಗಳೊಡನೆ ನಿಜವಾಗಿಯೂ ಶಿಕ್ಷಣ ವ್ಯವಸ್ಥೆಯಲ್ಲಿ ಸಮನ್ವಯಗೊಳಿಸಲು ನಮ್ಮ ಶಿಕ್ಷಣ ಸಂಸ್ಥೆಗಳು ಯಾವ ವಿಧಾನವನ್ನು ಅಳವಡಿಸಿಕೊಳ್ಳಬೇಕು?
- ವಿಶೇಷವಾಗಿ ಸೌಲಭ್ಯವಂಚಿತ ಮಕ್ಕಳನ್ನು ಶಾಲಾ ವ್ಯವಸ್ಥೆಯಲ್ಲಿ ಒಳಪಡಿಸಲು ಆರ್.ಟಿ.ಇ. ಯಾವ ಮಟ್ಟದಲ್ಲಿ ಸಹಕಾರಿಯಾಗಿದೆ ಎಂಬುದು ನಿಮ್ಮ ಅಭಿಪ್ರಾಯವಾಗಿದೆ?
- ಪೋಷಕರು / ತಂದೆ-ತಾಯಿಯರು ಹೆಣ್ಣು ಮಕ್ಕಳನ್ನು ಶಾಲೆಗೆ ಏಕೆ ಕಳುಹಿಸುವುದಿಲ್ಲ?
- ಹೆಣ್ಣು ಮಕ್ಕಳನ್ನು ಶಾಲೆಗೆ ಕರೆತರಲು ಸರ್ಕಾರವು ಯಾವ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಿದೆ?
- ಎಲ್ಲಾ ಹೆಣ್ಣು ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಲು ಹೇಗೆ ಸಮುದಾಯವನ್ನು ಸಜ್ಜುಗೊಳಿಸಬಹುದು?
- ಆರ್.ಟಿ.ಇ.ಅಡಿಯಲ್ಲಿ ಅಲ್ಪಸಂಖ್ಯಾತ ಸಂಸ್ಥೆಗಳನ್ನು ಹೊರತು ಪಡಿಸಿರುವುದರಿಂದ ಆಗಿರುವ ಅಪಾಯಗಳು / ತೊಂದರೆಗಳು ಏನು?
- ಬುಡಕಟ್ಟು ಜನಾಂಗದ ಸ್ಥಳದ ಶಾಲೆಗಳಲ್ಲಿ ವಿಶೇಷವಾದ ಸಂಪ್ರದಾಯಿಕ ಕೌಶಲಗಳ ಅಭಿವೃದ್ಧಿಯ ಗುರಿಯನ್ನು ಪ್ರೋತ್ಸಾಹಿಸಲು ಯಾವುದಾದರೂ ಕ್ರಮ ಕೈಗೊಳ್ಳಲಾಗಿದೆಯೇ?
- ಹೆಣ್ಣು ಮಕ್ಕಳ / ಸ್ತ್ರೀಯರ ಶಿಕ್ಷಣದಲ್ಲಿ ವಿಶೇಷವಾಗಿ ಕೌಶಲಗಳಲ್ಲಿ ಹಣಕಾಸು ಸಂಬಂಧ, ಕಾನೂನು ಸಂಬಂಧ, ಶಿಕ್ಷಣ ವಿಷಯಗಳನ್ನು ಅಳವಡಿಸಿಕೊಳ್ಳಬಹುದೆ?
- ಭಾಷೆಗೆ ಸಂಬಂಧಿಸಿದಂತೆ ಸವಾಲುಗಳನ್ನು ಗುರ್ತಿಸುವುದು ಹೇಗೆ ಮತ್ತು ಇದಕ್ಕೆ ಯಾವ ಪರಿಹಾರಗಳನ್ನು ಕಂಡುಕೊಳ್ಳಬಹುದು?

## 11. ಭಾಷೆಗಳನ್ನು ಅಭಿವೃದ್ಧಿಗೊಳಿಸುವುದು – Promotion of Languages

ಬಹು ಭಾಷಾ ಸಮಾಜವು ಶಿಕ್ಷಣದಲ್ಲಿ ಭಾಷೆಯ ಪ್ರಾಮುಖ್ಯತೆಯನ್ನು ಗುರ್ತಿಸುತ್ತದೆ. ಕೆಲವು ಚಟುವಟಿಕೆಗಳು ಭಾಷಾ ಶಿಕ್ಷಕರ ನೇಮಕಾತಿ, ಶಾಸ್ತ್ರೀಯ ಭಾಷೆಗಳ ಪ್ರಚಾರ ಇವುಗಳ ಬಗ್ಗೆ ಅನುಷ್ಠಾನಗೊಂಡಿದ್ದರೂ, ಭಾಷೆಯ ಬಗ್ಗೆ ಸಮಗ್ರ ವ್ಯವಸ್ಥೆ ಅಥವಾ ಭಾಷಾ ನೀತಿಯನ್ನು ರೂಪಿಸಿರುವುದಿಲ್ಲ. ನಾವು ಈ ನಿಟ್ಟಿನಲ್ಲಿ ಯೋಚಿಸುವ ಅಗತ್ಯತೆ ಇದೆ. ಭಾರತದಲ್ಲಿ ಮುಖ್ಯವಾಗಿ 3 ಭಾಷೆಗಳ ನಿಯಮವನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಪ್ರಾರಂಭದ ಹಂತದಲ್ಲಿ ಮಾತೃಭಾಷೆಯಲ್ಲಿಯೇ ಕಲಿಕೆಯಾಗಬೇಕು ಎಂಬ ಸಲಹೆಯನ್ನೂ ಕೂಡ ನೀಡಲಾಗಿದೆ. ಕೆಲಸದ ಪ್ರಪಂಚಕ್ಕೆ ಪ್ರವೇಶಿಸುವ ವೇಳೆಯಲ್ಲಿ ಇಂಗ್ಲೀಷ್ ಮಾಧ್ಯಮದ ಶಿಕ್ಷಣವು ಇತರೆ ಭಾಷೆಗಳಿಗಿಂತ ಹೆಚ್ಚು ಅನುಕೂಲಕರವಾಗಿದೆ ಎಂಬ ಸಾಮಾನ್ಯ ಅಭಿಪ್ರಾಯವೂ ಇದೆ.

ಆಂದ್ರ ಪ್ರದೇಶ, ಒರಿಸ್ಸಾಗಳಲ್ಲಿ 8–10 ಬುಡಕಟ್ಟು ಭಾಷೆಗಳನ್ನೊಳಗೊಂಡಂತೆ, ಬಹುಭಾಷಾ ಶಿಕ್ಷಣವನ್ನು ನೀಡಲು ವ್ಯವಸ್ಥಿತ ಯೋಜಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ಅಸ್ಸಾಂ, ಛತ್ತೀಸ್‌ಘರ್, ಬಿಹಾರ್ ಮತ್ತು ಜಾರ್ಖಂಡ್‌ಗಳಲ್ಲಿ ಸ್ಥಳೀಯ ಭಾಷೆ ಮತ್ತು ಭಾಷಾ ಮಾಧ್ಯಮದೊಡನೆ ಸಂಪರ್ಕ ಕಲ್ಪಿಸುವ ನಿಘಂಟು, ಓದುವ ಕಾರ್ಡುಗಳನ್ನು ಮಾಡಿರುತ್ತಾರೆ. ರಾಜ್ಯಗಳು ನಿಧಾನವಾಗಿ ಹೆಚ್ಚು ಶಾಲೆಗಳನ್ನು ದ್ವಿಭಾಷಾ ಅಥವಾ ಬಹುಬಾಷಾ ತರಗತಿಗಳನ್ನು ನಡೆಸುವತ್ತ ವಿಸ್ತರಿಸುತ್ತಿವೆ.

ಮಾತೃಭಾಷಾ ಆಧಾರಿತ ಶಿಕ್ಷಣದ ಮೂಲಕ ಬುಡಕಟ್ಟು ಮಕ್ಕಳ ದಾಖಲಾತಿ ಹಾಗೂ ಹಾಜರಾತಿಯಲ್ಲಿ ಗಣನೀಯ ಏರಿಕೆಯಾಗಿರುವುದು ಕಂಡು ಬಂದಿದೆ. ಅಲ್ಲದೇ ಬುಡಕಟ್ಟು ಸಂಸ್ಕೃತಿಗೆ ಸಂಬಂಧಿಸಿದ ಚಿತ್ರಗಳು, ಹಸ್ತಕೃತಿಗಳ ಮೂಲಕ ಸಂವಹನ ನಡೆಸಿದಲ್ಲಿ ಮಕ್ಕಳು ಹೆಚ್ಚು ಕಲಿಕಾ ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಗ್ಗೆ ಮಾಹಿತಿಗಳಿವೆ.

ಎನ್.ಸಿ.ಇ.ಆರ್.ಟಿ. ಮೌಲ್ಯಮಾಪನ ಅಧ್ಯಯನವು ಮಕ್ಕಳ ಭಾಷೆ ಮತ್ತು ಗಣಿತ ಸಾಧನೆಯಲ್ಲಿ ಮಾತೃಭಾಷೆ ಆಧಾರಿತ ಶಿಕ್ಷಣವು ಹೆಚ್ಚು ಪರಿಣಾಮಕಾರಿಯಾಗಿದೆ ಎಂಬುದನ್ನು ಕಂಡು ಹಿಡಿಯಲಾಗಿದೆ. ಇತರೆ ಕಾರ್ಯತಂತ್ರಗಳ ಶಾಲೆಗೆ ಹೋಲಿಸಿದಾಗಿ ಈ ಮಕ್ಕಳು ಮೌಖಿಕ, ಲಿಖಿತ ಮತ್ತು ಗಣಿತ ಪರೀಕ್ಷೆಗಳಲ್ಲಿ ಗಮನಾರ್ಹ ಸಾಧನೆಗಳನ್ನು ಮಾಡಿರುತ್ತಾರೆ.

- ಶಾಲೆಯಲ್ಲಿ ಯಾವ ಭಾಷೆಗಳನ್ನು ನಿಮ್ಮ ಮಗು ಕಲಿಯಬೇಕೆಂದು ಇಚ್ಛೆ ಪಡುವಿರಿ?
- ಶಾಲಾ ಶಿಕ್ಷಣದಲ್ಲಿ ಇಂಗ್ಲೀಷ್, ಹಿಂದಿ ಮತ್ತು ಸ್ಥಳೀಯ ಭಾಷೆಗಳಿಗೆ ಯಾವ ಸ್ಥಾನವನ್ನು ಕೊಡಬೇಕು?
- ಶಾಲೆಯಲ್ಲಿ ಯಾವ ಭಾಷೆಯಲ್ಲಿ ಬೋಧಿಸುವುದಕ್ಕೆ ನೀವು ಪ್ರಾಮುಖ್ಯತೆಯನ್ನು ನೀಡುತ್ತೀರಿ?
- ಮಾತೃಭಾಷೆ ಮತ್ತು ಬಹು ಭಾಷೆಯನ್ನು ಶಾಲಾ ಶಿಕ್ಷಣದಲ್ಲಿ ಅಳವಡಿಸಲು ಪ್ರೋತ್ಸಾಹಿಸುವಿರಾ? ಇದನ್ನು ಅನುಷ್ಠಾನಗೊಳಿಸುವಲ್ಲಿ ಇರುವ ಕಷ್ಟಗಳೇನು?
- ತ್ರಿಭಾಷಾ ಸೂತ್ರವನ್ನು ಚರ್ಚೆಗೆ ಒಳಪಡಿಸಬೇಕೆ?
- ಸ್ಪರ್ಧಾತ್ಮಕ ಪ್ರಪಂಚದಲ್ಲಿ ಯಾವ ಹಂತದಲ್ಲಿ ಮತ್ತು ಹೇಗೆ ವಿದೇಶಿ ಭಾಷೆಗಳನ್ನು ಶಾಲೆಯಲ್ಲಿ ಹೆಚ್ಚುವರಿ ಸಾಧನವಾಗಿ ಬಳಸಬಹುದು?

## 12. ಸಮಗ್ರ ಶಿಕ್ಷಣ – ಮೌಲ್ಯಗಳು, ದೈಹಿಕ ಶಿಕ್ಷಣ, ಕಲೆ ಮತ್ತು ಕರಕುಶಲ ಶಿಕ್ಷಣ, ಜೀವನ ಕೌಶಲಗಳು.

ಶಿಕ್ಷಣವು ಮಗುವಿನ ಸರ್ವತೋಮುಖ ಅಭಿವೃದ್ಧಿಗೆ ಸಂಬಂಧಿಸಿದ ವಿಷಯವಾಗಿದೆ. (ಭೌತಿಕ, ಸಾಮಾಜಿಕ, ಅರಿವಿನ ಜೊತೆಗೆ ಭಾವನಾತ್ಮಕ), ಶೈಕ್ಷಣಿಕ ಸಾಧನೆಯುನ್ನು ಮಾತ್ರ ಮೌಲ್ಯಮಾಪನ ಮಾಡದೇ ಎಲ್ಲಾ ಅಂಶಗಳನ್ನೂ ಮೌಲ್ಯಮಾಪನ ಮಾಡಬೇಕಿದೆ. 12ನೇ ಯೋಜನೆಯ ಉಪಕ್ರಮವಾಗಿ, ಮಗುವಿನ ಕಲಿಕಾ ಪರಿಣಾಮದ ಜೊತೆ ಇತರೆ ಪಠ್ಯೇತರ ವಲಯಗಳ ಸಂಪೂರ್ಣ ಅಭಿವೃದ್ಧಿಗಾಗಿ ಬುದ್ದಿವಂತಿಕೆಯಿಂದ ವ್ಯವಸ್ಥಿತ ಗಮನ ನೀಡಬೇಕಿದೆ. ನಮ್ಮ ಮಕ್ಕಳು ಕೇವಲ ಮಾಹಿತಿ ಮತ್ತು ಆದೇಶಗಳ ಮೂಲಕ ಸಾಧಿಸಲಾಗದ ಸಮಗ್ರ ಅಭಿವೃದ್ಧಿಯನ್ನು ಹೊಂದುವ ಅಗತ್ಯವಿದೆ. ದೈಹಿಕ ಶಿಕ್ಷಣ, ಆಟಗಳು ಮತ್ತು ಕ್ರೀಡೆಗಳನ್ನು ಪಠ್ಯವಸ್ತುವಿನ ಅವಿಭಾಜ್ಯ ಅಂಶವನ್ನಾಗಿಸುವುದಲ್ಲದೇ, ಮಗುವಿನ ಸಮಗ್ರ ಅಭಿವೃದ್ಧಿಗಾಗಿ ಇವುಗಳನ್ನು ದಿನನಿತ್ಯ ವಾಡಿಕೆ ಕ್ರಮವಾಗಿಸಬೇಕು.

ಆರ್.ಟಿ.ಇ. ಕಾಯಿದೆಯ ಷೆಡ್ಯೂಲ್‌ನಲ್ಲಿ ಶಾಲೆಗಳಿಗೆ ಆಟದ ಸಾಮಗ್ರಿಗಳು, ಕ್ರೀಡಾ ಪರಿಕರಗಳು ಲಭ್ಯವಾಗುವುದನ್ನು ಕಡ್ಡಾಯಗೊಳಿಸಿದೆ. ನಗರ ಪ್ರದೇಶಗಳಲ್ಲಿ ಅನೇಕ ಶಾಲೆಗಳಲ್ಲಿ ಕ್ರೀಡೆಗೆ ಅಗತ್ಯ ಸೌಲಭ್ಯ ಒದಗಿಸಲು ಸಾಧ್ಯವಾಗದ ಕಾರಣ, ಅವರು ಹತ್ತಿರದಲ್ಲಿನ ಶಾಲೆಗಳ ಅಥವಾ ಖಾಸಗಿ ಶಾಲೆಗಳ ಅಥವಾ ಖಾಸಗಿ ಒಡೆತನದ ಸ್ಥಳಗಳನ್ನು, ಪಾರ್ಕ್‌ಗಳನ್ನು ನಿರ್ಧಿಷ್ಟ ಕನಿಷ್ಠ ಶುಲ್ಕ ನೀಡಿ ಶಾಲಾ ಅವಧಿಯಲ್ಲಿ ಖಾಸಗಿ–ಸಾರ್ವಜನಿಕ ಪಾಲುದಾರಿಕೆಯಲ್ಲಿ ಉಪಯೋಗಿಸುವ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಇದರ ಬಗ್ಗೆ ಒಂದು ವಿನೂತನ ಕಾರ್ಯಕ್ರಮವನ್ನು ರೂಪಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಸೇವಾ ಪೂರ್ವ ಹಾಗೂ ಸೇವಾ ನಿರತ ತರಬೇತಿಯಲ್ಲಿ ದೈಹಿಕ ಶಿಕ್ಷಣವನ್ನು ಅಳವಡಿಸಿ, ಇದನ್ನು ಶಾಲೆಯಲ್ಲಿ ಸಮನ್ವಯಗೊಳಿಸಿ, ಉತ್ತಮ ಗುಣಮಟ್ಟ ಶಿಕ್ಷಣ ನೀಡಲು ಕ್ರಮ ಕೈಗೊಳ್ಳಬೇಕು.

ಮಕ್ಕಳಲ್ಲಿ ವಿಭಿನ್ನ ಸಾಮರ್ಥ್ಯವನ್ನು ಬೆಳೆಸುವ ದೃಶ್ಯ ಮತ್ತು ಪ್ರದರ್ಶಕ ಕಲೆಗಳನ್ನು ಶಾಲಾ ಶಿಕ್ಷಣದಲ್ಲಿ ಅಳವಡಿಸಬೇಕು. ಕಲಿಕಾ ಪ್ರಕ್ರಿಯೆಯಲ್ಲಿ ಕಲೆಯು ಬಹಳ ಪ್ರಮುಖ ಪಾತ್ರ ವಹಿಸುತ್ತದೆ. ಇದು ಮಕ್ಕಳಲ್ಲಿ ಕಲ್ಪನಾ ಶಕ್ತಿ, ಭಾವನೆಗಳು ಹಾಗೂ ಆಲೋಚನೆಗಳನ್ನು

ವ್ಯಕ್ತಪಡಿಸುವ ಸ್ವಭಾವವನ್ನು ಬೆಳೆಸುತ್ತದೆ. ಮಕ್ಕಳು ಭಾಗವಹಿಸಲು, ಮಾತುಕತೆ ನಡೆಸಲು, ಅವರ ಭಾವನೆಗಳನ್ನು ವ್ಯಕ್ತಪಡಿಸಲು, ಕಲ್ಪನೆ ಮಾಡಲು, ನೋಡಲು ಅವಕಾಶಗಳನ್ನು ಕಲ್ಪಿಸಿದಾಗ ಮಕ್ಕಳು ಸಂತೋಷದಿಂದ ಅನುಭವಿಸುವುದಲ್ಲದೇ, ಕಲಿಕೆಯನ್ನು ಸುಲಭವಾಗಿ ಸಾಧಿಸಲು ಸಹಾಯವಾಗುತ್ತದೆ. ಮಕ್ಕಳು ಎಲ್ಲಾ ವಿಷಯಗಳಲ್ಲೂ ಹಾಗೂ ದಿನ ನಿತ್ಯ ಜೀವನದೊಡನೆ ಕಲೆಯನ್ನು ಸಂಯೋಜಿಸುವುದರಿಂದ ಕಲಿಕೆಯಲ್ಲಿ ಆಸಕ್ತಿ ಹೆಚ್ಚುತ್ತದೆ. ಕಲೆಯು ಅರಿವಿನ ಘಟಕವಾಗಿದೆ, ಇದು ನಮ್ಮನ್ನು ಆಲೋಚಿಸಲು, ಪ್ರತಿಕ್ರಿಯಿಸಲು, ಕಲ್ಪನೆ ಮಾಡಲು, ಗ್ರಹಿಸಲು ಮತ್ತು ಸೃಷ್ಟಿ ಮಾಡಲು ಕಲಿಸುತ್ತದೆ. ಶಾಲೆಯ ಪಠ್ಯಕ್ರಮದಲ್ಲಿ ಕಲೆಯನ್ನು ಸೇರಿಸಲು ಮತ್ತು ಅನುಷ್ಠಾನಗೊಳಿಸಲು ಹೆಸರಾಂತ ಕಲಾ ಸಂಸ್ಥೆಗಳು ಮತ್ತು ಕೇಂದ್ರ ಅಕಾಡೆಮಿಗಳು ಗಮನಾರ್ಹ ಕೊಡುಗೆಯನ್ನು ನೀಡಬಹುದಾಗಿದೆ.

ಜ್ಞಾನವು ಮೌಲ್ಯಗಳು, ನೈತಿಕತೆ, ಶ್ಲಾಘನೆ, ಕಲೆ, ದೈಹಿಕ ಶಿಕ್ಷಣ, ಕ್ರೀಡೆ ಮತ್ತು ಜೀವನ ಕೌಶಲ್ಯಗಳ ಸಂವೇದನೆಯನ್ನು ಅರ್ಥ ಮಾಡಿಕೊಳ್ಳುವ ಅಗತ್ಯತೆಯನ್ನು ಒಳಗೊಂಡಿದೆ.

- ಪಠ್ಯಕ್ರಮದಲ್ಲಿ ಸಮನ್ವಯಿತ ಕ್ರೀಡೆ, ದೈಹಿಕ ಶಿಕ್ಷಣ, ಕಲೆ, ಕಾರ್ಯಗತ ಕೌಶಲ್ಯಗಳು ಮತ್ತು ಜೀವನ ಕೌಶಲ್ಯಗಳು, ಮೌಲ್ಯ ಶಿಕ್ಷಣ ಇವುಗಳನ್ನು ಸೇರಿಸಲು ಯಾವ ಅಗತ್ಯ ವಿಧಾನಗಳನ್ನು ಶಿಫಾರಸ್ಸು ಮಾಡುತ್ತೀರಿ?
- ಇಲ್ಲಿಯವರೆಗಿನ ನಿಮ್ಮ ಅನುಭವವೇನು ಮತ್ತು ಇದನ್ನು ರಚನಾತ್ಮಕ ರೀತಿಯಲ್ಲಿ ಹೇಗೆ ಮಾಡಬಹುದು?
- ನೈತಿಕ ಶಿಕ್ಷಣವನ್ನು ಕಡ್ಡಾಯಗೊಳಿಸುವ ಬಗ್ಗೆ ಯಾವ ರೀತಿಯಲ್ಲಿ ಮಾರ್ಗಗಳನ್ನು ಅನ್ವೇಷಿಸಬಹುದು?
- ಸಮಗ್ರ ಶಿಕ್ಷಣವನ್ನು ಪ್ರಚುರ ಪಡಿಸುವುದರಲ್ಲಿ ಎನ್.ಸಿ.ಸಿ.ಯ ಪಾತ್ರವೇನು?

## 13. ಮಕ್ಕಳ ಆರೋಗ್ಯದೆಡೆ ಕೇಂದ್ರೀಕರಣ

ಮಕ್ಕಳ ಆರೋಗ್ಯ ಸೇವೆಯ ಲಭ್ಯತೆಯನ್ನು ಸುಧಾರಿಸುವ ಅಗತ್ಯತೆ ಇದೆ. ಸೂಕ್ತ ಕಾರ್ಯತಂತ್ರಗಳ ಮೂಲಕ ಮಕ್ಕಳ ಆರೋಗ್ಯವನ್ನು ಪ್ರಚುರ ಪಡಿಸಲು ಆರೋಗ್ಯ ಮಂತ್ರಾಲಯವು ಗಮನ ಹರಿಸುತ್ತದೆ.

ಪ್ರಸ್ತುತದಲ್ಲಿ 6–14ನೇ ವಯಸ್ಸಿನ ಮಕ್ಕಳ ಪೌಷ್ಟಿಕ ಅಗತ್ಯತೆಯನ್ನು ಮಾನವ ಸಂಪನ್ಮೂಲ ಮಂತ್ರಾಲಯದ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯು ಗುರ್ತಿಸಿ, ಅದನ್ನು ಮಧ್ಯಾಹ್ನ ಉಪಹಾರದ ಮೂಲಕ ಪೂರ್ಣಗೊಳಿಸಲಾಗುತ್ತಿದೆ. ಪ್ರಾಥಮಿಕ ಶಾಲೆಯ ಮಕ್ಕಳಲ್ಲಿ ದಾಖಲಾತಿ, ಶಾಲೆಯಲ್ಲಿ ಉಳಿಯುವಿಕೆ, ಹಾಜರಾತಿ, ಪೌಷ್ಠಿಕತೆಯನ್ನು ಅಭಿವೃದ್ಧಿಗೊಳಿಸಲು, ಆಗಸ್ಟ್ 1995ರಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಪೌಷ್ಠಿಕತೆ ಎಂಬ ಕೇಂದ್ರ ಪ್ರಾಯೋಜಿತ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. 2008–09ರಲ್ಲಿ ಸದರಿ ಕಾರ್ಯಕ್ರಮವನ್ನು ಹಿರಿಯ ಪ್ರಾಥಮಿಕ ಶಾಲೆಗಳಿಗೂ ವಿಸ್ತರಿಸಿ "ಶಾಲೆಗಳಲ್ಲಿ ರಾಷ್ಟ್ರೀಯ ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮ" ಎಂದು ಕಾರ್ಯಕ್ರಮವನ್ನು ಮರು ನಾಮಕರಣ ಮಾಡಲಾಯಿತು. ಕಾರ್ಯಕ್ರಮದ ಗುರಿ ಎಂದರೆ 1) 1 ರಿಂದ 8ನೇ ತರಗತಿಯ ಮಕ್ಕಳ ಪೌಷ್ಠಕ ಸ್ಥಿತಿಯನ್ನು ಸುಧಾರಿಸುವುದು (2) ಸೌಲಭ್ಯವಂಚಿತ ಗುಂಪುಗಳಲ್ಲಿನ ಬಡ ಮಕ್ಕಳನ್ನು ಶಾಲೆಗೆ ದಾಖಲಾಗಲು ಪ್ರೋತ್ಸಾಹಿಸುವುದು ಹಾಗೂ ಅವರು ತರಗತಿಯ ಚಟುವಟಿಕೆಗಳಲ್ಲಿ ಗಮನ ನೀಡುವಂತೆ ಮಾಡುವುದು (3) ರಜೆ ಅವಧಿಯಲ್ಲಿ ಬರ ಪೀಡಿತ ಸ್ಥಳಗಳಲ್ಲಿ ಪ್ರಾಥಮಿಕ ಹಂತದ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರ ನೀಡುವ ಮೂಲಕ ಸಹಕರಿಸುವುದು. ಈ ಮಧ್ಯಾಹ್ನ ಉಪಹಾರ ಯೋಜನೆಯು ಪ್ರಸ್ತುತದಲ್ಲಿ ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಸ್ಥಳೀಯ ಸಂಸ್ಥೆಯ ಶಾಲೆಗಳಲ್ಲಿ ಓದುತ್ತಿರುವ 1 ರಿಂದ 8ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ತನ್ನ ವ್ಯಾಪ್ತಿಗೆ ತಂದಿದೆ. ಆದರೂ, ತರಗತಿಯ ಪ್ರಗತಿ ಮತ್ತು ಹಾಜರಾತಿಯ ಮೇಲೆ ಸಮಗ್ರ ಪರಿಣಾಮ ಬೀರುವ ಅಪೌಷ್ಠಿಕತೆ, ಹಸಿವು ಹಾಗೂ ಅನಾರೋಗ್ಯದ ವಿಷಯಗಳು ಇನ್ನೂ ಪ್ರಮುಖ ಸಮಸ್ಯೆಗಳಾಗಿ ಉಳಿದಿವೆ.

ಪ್ರಮುಖ ಸಾರ್ವಜನಿಕ ಕಾರ್ಯಕ್ರಮವಾಗಿ ಪ್ರಾರಂಭವಾದ ಶಿಶು ರಕ್ಷಣೆ (ಇ.ಸಿ.ಸಿ.ಇ) ಕಾರ್ಯಕ್ರಮವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಡೆಸುವ ಸಮನ್ವಯ ಶಿಶು ಅಭಿವೃದ್ಧಿ ಸೇವೆ (ಐ.ಸಿ.ಡಿ.ಎಸ್.) ಕಾರ್ಯಕ್ರಮದೊಂದಿಗೆ ಸೇರಿಕೊಂಡಿದೆ. ಇದು ಪೂರ್ವ ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಕಾರ್ಯತತ್ಪರವಾಗಿದೆ. ಅದರೊಂದಿಗೆ

ಅಪೌಷ್ಟಿಕತೆಯ ವಿಷ ವರ್ತುಲವನ್ನು ಹೊಡೆದೋಡಿಸುವುದು, ಅನಾರೋಗ್ಯ, ಕಲಿಕೆಯ ಸಾಮರ್ಥ್ಯದ ಕೊರತೆ, ಮತ್ತು ಶಿಶು ಮರಣ ಪ್ರಮಾಣ ಮುಂತಾದ ಶಿಶು ಸಂಬಂಧಿತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತದೆ. ಐ.ಸಿ.ಡಿ.ಎಸ್. ಕಾರ್ಯಕ್ರಮವು 0 ಯಿಂದ 5+ವರೆಗಿನ ವಯೋಮನಾನದ ಮಕ್ಕಳ ಪೌಷ್ಠಿಕತೆ ಮತ್ತು ಆರೋಗ್ಯ ಸ್ಥಿತಿಯಲ್ಲಿ ಅಭಿವೃದ್ಧಿ ತರಲು ಪ್ರಯತ್ನಿಸುತ್ತದೆ. ಮಗುವಿಗೆ ಸರಿಯಾದ ಮಾನಸಿಕ, ದೈಹಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಬುನಾದಿಯನ್ನು ಹಾಕುತ್ತದೆ. ಅನಾರೋಗ್ಯ, ಶಿಶು ಮರಣ, ಅಪೌಷ್ಠಿಕತೆ ಮತ್ತು ಶಾಲೆ ತೊರೆಯುವಿಕೆಯನ್ನು ಇದು ಕಡಿಮೆ ಮಾಡುತ್ತದೆ. ಮಗುವಿನ ಸರ್ವತೋಮುಖ ಅಭಿವೃದ್ಧಿಯನ್ನು ಖಾತರಿ ಪಡಿಸಲು ಇತರೆ ಇಲಾಖೆಗಳ ಸಹಕಾರವನ್ನು ಪಡೆದು ಪರಿಣಾಮಕಾರಿಯಾದ ಸಹಕಾರಿ ನಿಯಮವನ್ನು ಅನುಷ್ಠಾನಗೊಳಿಸುತ್ತದೆ. ಸರಿಯಾದ ಪೌಷ್ಠಿಕತೆ ಹಾಗೂ ಆರೋಗ್ಯವನ್ನು ನೋಡಿಕೊಳ್ಳುವ ಬಗ್ಗೆ ಮಗುವಿನ ತಾಯಿಗೆ ಅರಿವನ್ನು ನೀಡುವುದರ ಮೂಲಕ ಮಕ್ಕಳ ಆರೋಗ್ಯವನ್ನು ನೀಡುತ್ತಾರೆ. ಇದಕ್ಕೆ ಸಂಬಂದಿಸಿದಂತೆ ಬಹುಕ್ಷೇತ್ರೀಯ ಮಧ್ಯಸ್ಥಿಕೆಗಳನ್ನು ಕ್ರೋಢೀಕರಿಸಿ, ಸಂಬಂಧಿಸಿದ ಕೇಂದ್ರ ಸರ್ಕಾರದ ಇಲಾಖೆಗಳ ಗಮನಕ್ಕೆ ತರುವ ಮೂಲಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೆಕಾಗಿದೆ.

- ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಸಾಮಾಜಿಕ ಹಾಗೂ ಭಾವನಾತ್ಮಕ ಕಲಿಕೆ ಇಲಾಖೆಗಳ (ಎಸ್.ಇ.ಎಲ್) ಕಾರ್ಯಕ್ರಮಗಳು ಮಗುವಿನ ಆರೋಗ್ಯದ ಮೇಲೆ ನಿಗದಿ ಪಡಿಸಿದ ಗುರಿಯ ಪರಿಣಾಮ ಏನು?
- ಸಮಗ್ರ ಪರಿಣಾಮಕ್ಕಾಗಿ ಪ್ರಸ್ತುತದಲ್ಲಿರುವ ಎಲ್ಲಾ ಕಾರ್ಯಕ್ರಮಗಳ ಸಮನ್ವಯತೆ ಹಾಗೂ ಕ್ರೋಢೀಕರಣ ಸಾಧಿಸಲಾಗಿದೆಯೇ? ಇಲ್ಲದಿದಲ್ಲಿ ಯಾವ ರೀತಿ ಇದನ್ನು ಪರಿಹರಿಸಬಹುದು?
- ಮಗುವಿನ ಆರೋಗ್ಯವನ್ನು ಸಮಗ್ರವಾಗಿ ಗಮನಿಸುವ ಬಗ್ಗೆ ಇನ್ನು ಯಾವ ಕ್ರಮಗಳನ್ನು ಕೈಗೊಳ್ಳಬಹುದು? ಯಾವುದೇ ರಾಜ್ಯವು ತಮ್ಮ ಅನುಭವಗಳನ್ನು ಮರು ರೂಪಗೊಳಿಸಿ ರಾಷ್ಟ್ರೀಯ ಮಟ್ಟದಲ್ಲಿ ಮಾಪನ ಮಾಡುವ ಕಾರ್ಯಕ್ರಮವನ್ನು ಮಾಡಿವೆಯೇ?
- ಪ್ರತಿ ಮಗುವಿನ ಆರೋಗ್ಯವನ್ನು ಟ್ರಾಕ್ ಮಾಡುವ ವ್ಯವಸ್ಥಿತ ವಿಧಾನವನ್ನು ಹೇಗೆ ಶಾಲಾ ವ್ಯವಸ್ಥೆಯಲ್ಲಿ ರೂಪಿಸಬಹುದು ಮತ್ತು ರಾಜ್ಯ ಮತ್ತು ಕೇಂದ್ರದಲ್ಲಿ ಇದಕ್ಕೆ ಅಗತ್ಯ ನೈಜ ಮಾಹಿತಿ ಇದೆಯೇ?